ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ


ನವೆಂಬರ್ 2013 ಮಾಸ ಪತ್ರಿಕೆ

ಸಂಪುಟ : 36
ಸಂಚಿಕೆ : 2
ಪುಟ : 12
ಬೆಲೆ : ₹ 5/-


ಬೇಲೂರು




ಪಟ್ಟದಕಲ್ಲು



ಐಹೊಳೆ



ಕನಕನ ಕಿಂಡಿ, ಉಡುಪಿ






## ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ


A Journal of Karnataka State Secondary Teachers' Association

# ಸಂಪಾದಕೀಯ

ನಮ್ಮ ಎಲ್ಲ ಓದುಗರಿಗೆ, ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ದೀಪಾವಳಿ ಹಬ್ಬದ ಮತ್ತು ಕನ್ನಡ ರಾಜ್ಯೋತ್ಸವದ ಶುಭಾಶಯಗಳು. ಬೆಳಕಿನ ದೀಪಾವಳಿ ನಮ್ಮ ಮನಸ್ಸಿನ ಕತ್ತಲೆಯನ್ನು ದೂರಮಾಡಿ ಸುಖ, ಸಂತೋಷ, ನೆಮ್ಮದಿಗಳನ್ನು ತರುವುದೆಂಬ ಆಶಯ ನಮ್ಮದು. ಅಂದು ನರಕಾಸುರನನ್ನು ಸಂಹರಿಸಿ ಶಿಷ್ಟರನ್ನು ಸಂರಕ್ಷಿಸಿದ ಶ್ರೀಕೃಷ್ಣ ಪರಮಾತ್ಮ. ಆ ನರಕಾಸುರನನ್ನೂ ಮೀರಿಸಿದ ಆಸುರೀ ಶಕ್ತಿ ಈಗ ಎಲ್ಲರನ್ನೂ ಕಾಡುತ್ತಿದೆ. ಈ ದುಷ್ಟಶಕ್ತಿಗಳನ್ನು ಸಂಹರಿಸಲು ಆ ದೈವೀಶಕ್ತಿ ಅವತರಿಸುವುದು ಯಾವಾಗ ಎನ್ನುವ ಪ್ರಶ್ನೆ ಕಾಡುತ್ತದೆ. ಆ ಕಾಲ ಬೇಗ ಬಂದು ಜನರ ಮನಸ್ಸಿನ ರಾಕ್ಷಸೀ ಪ್ರವೃತ್ತಿ ಮಾಯವಾಗಿ ಎಲ್ಲರೂ ನೆಮ್ಮದಿಯ ಜೀವನ ನಡೆಸಿ, ಸುಖೀ ಸಮಾಜವನ್ನು ಕಾಣುವಂತಾಗಲಿ ಎಂದು ಹಾರೈಸೋಣ.

'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'. ಹುಯಿಲಗೋಳ ನಾರಾಯಣ ರಾಯರ ಕನಸಿನಂತೆ ನಾಡಿನ ಏಕೀಕರಣವಾಗಿದೆ. ಭೌಗೋಳಿಕವಾಗಿ ಕನ್ನಡನಾಡು ಒಂದಾಗಿದೆ. ಆದರೆ ಭಾವನಾತ್ಮಕವಾಗಿ? ಏಕೀಕರಣವಾದ ಸಂದರ್ಭದಲ್ಲಿ 58 ವರ್ಷಗಳ ಹಿಂದೆ 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂದು ನುಡಿದ ಕವಿವಾಣಿ ಇಂದಿಗೂ ಪ್ರಸ್ತುತವಾಗಿರುವುದು ವಿಪರ್ಯಾಸವೇ ಸರಿ.

ಕನ್ನಡಿಗರು ನಿರಭಿಮಾನಿಗಳು, ಅವರಿಗೆ ಕನ್ನಡ ನೆನಪಾಗುವುದು ರಾಜ್ಯೋತ್ಸವ ತಿಂಗಳಲ್ಲಿ ಮಾತ್ರ ಎಂಬ ಅಭಿಪ್ರಾಯವಿದೆ. ಇದು ವಾಸ್ತವವು ಹೌದು. ನವೆಂಬರ್ ತಿಂಗಳಲ್ಲಿ ಸರ್ಕಾರ, ಶಾಲೆಗಳು, ಸಂಘಸಂಸ್ಥೆಗಳು ಅದ್ದೂರಿಯ ಸಮಾರಂಭಗಳನ್ನು ನಡೆಸುತ್ತವೆ. ಕನ್ನಡದ ಬಗ್ಗೆ ಅತಿಥಿ-ಅಭ್ಯಾಗತರ ಭಾಷಣ, ಹಿತನುಡಿ, ಮನೋರಂಜನಾ ಕಾರ್ಯಕ್ರಮಗಳು ಬರ್ಜರಿಯಾಗೇ ನಡೆಯುತ್ತವೆ. ಆಮೇಲೆ ಎಲ್ಲವೂ ಮರೆಯಾಗುತ್ತದೆ. ಇದು ನಿಜವಾದ ಕನ್ನಡಾಭಿಮಾನವೇ? ಕರ್ನಾಟಕದವರಿಗೆ ಕನ್ನಡದಲ್ಲಿ ಮಾತನಾಡುವು ದೆಂದರೆ ಕೀಳರಿಮೆ. ಬಹಳಷ್ಟು ತಂದೆತಾಯಿಯರಿಗೆ ತಮ್ಮ ಮಕ್ಕಳು ಕನ್ನಡದಲ್ಲಿ ಮಾತನಾಡಿದರೆ ಘನತೆಗೆ ಕಡಮೆ ಎಂಬ ಭಾವನೆ ಇದೆ. ಇನ್ನು ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದಿಸುವುದಂತೂ ಇಲ್ಲವೇ ಇಲ್ಲ. ಈ ಪರಿಸ್ಥಿತಿನ ಹೊಸದೇನೂ ಅಲ್ಲ. ಪ್ರತಿ ವರ್ಷವೂ ಕೇಳುವ ಮಾತುಗಳು. ಇದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ?

ಹೌದು, ಮೊದಲು ನಾವು ಕನ್ನಡದಲ್ಲಿ ಮಾತನಾಡುವ ಅಭ್ಯಾಸ ಮಾಡಿಕೊಳ್ಳಬೇಕು. ಇಂಗ್ಲಿಷ್ ಭಾಷೆ ಹೇಗೆ ವಿಶ್ವವ್ಯಾಪಿಯಾಯಿತು ಎಂದು ಹೇಳುತ್ತಾ, ಆ ಭಾಷೆಯನ್ನಾಡುವ ಜನರೆಲ್ಲರೂ,_ ರಾಜಕಾರಣಿಗಳು, ವಿದ್ವಾಂಸರು, ವ್ಯಾಪಾರಿಗಳು, ಸಾಮಾನ್ಯ ಜನ_ ತಾವು ಹೋದೆಡೆಯೆಲ್ಲಾ ಇಂಗ್ಲಿಷ್‌ನಲ್ಲೇ ವ್ಯವಹರಿಸುತ್ತಿದ್ದರು ಎಂದು ಹೇಳುತ್ತಾರೆ. ಆ ಪ್ರಯತ್ನವನ್ನು ನಾವೂ ಮಾಡಬಹುದಲ್ಲವೇ? ಶಿಕ್ಷಕರು ವಿದ್ಯಾರ್ಥಿಗಳಿಗೆ ಶುದ್ಧವಾದ, ಸ್ಪಷ್ಟವಾದ ಕನ್ನಡವನ್ನು ಓದಲು, ಬರೆಯಲು ಹೇಳಿ ಕೊಡಬಹುದು. ವಿದ್ಯಾರ್ಥಿಗಳಿಗೆ ಒಳ್ಳೆಯ ಕನ್ನಡ ಪುಸ್ತಕಗಳನ್ನು ಓದಲು ಪ್ರೋತ್ಸಾಹಿಸಬಹುದು. 'ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ವಿದ್ಯಾರ್ಥಿಗಳಿಗೆ ಕನ್ನಡದ ಬಗ್ಗೆ ಅಭಿಮಾನ, ಅದರ, ವಿಶ್ವಾಸ ಮೂಡಿಸಿದರೆ ಮುಂದೊಂದು ದಿನ ಕನ್ನಡದ ಸ್ಥಾನ-ಮಾನ ಜನಮನದಲ್ಲಿ ನೆಲೆಸುವುದು ಖಂಡಿತ. ಆಗ ಅರ್ಥಪೂರ್ಣ ರಾಜ್ಯೋತ್ಸವ ಆಚರಣೆಯಾದೀತು.

ದಾಸ ಸಾಹಿತ್ಯದಲ್ಲಿ ಕನಕದಾಸರ ಹೆಸರು ಚಿರಸ್ಥಾಯಿಯಾದುದು. ಕನಕದಾಸರು ದಾಸ ಶ್ರೇಷ್ಠರಲ್ಲಿ ಪ್ರಮುಖರು; ಶ್ರೇಷ್ಠ ಭಕ್ತರು. ತಮ್ಮ ಸುಂದರವಾದ ಕೀರ್ತನೆಗಳ ಮೂಲಕ ಸಮಾಜದಲ್ಲಿ ಜಾಗೃತಿ ಉಂಟು ಮಾಡಿದವರು. ಕನಕದಾಸರ ಜಯಂತಿಯ ಈ ಸಂದರ್ಭದಲ್ಲಿ ಅವರ ಜೀವನ, ಸಾಧನೆಗಳನ್ನು ನೆನೆಯುವುದು ಎಲ್ಲರ ಕರ್ತವ್ಯ.

ನವೆಂಬರ್ 14 ಮಕ್ಕಳ ದಿನಾಚರಣೆ. ಮಕ್ಕಳನ್ನು ಸತ್ಪ್ರಜೆಗಳಾಗಿ ರೂಪಿಸುವುದು ನಮ್ಮೆಲ್ಲರ ಕರ್ತವ್ಯ. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಟ್ಟು ಅವರನ್ನು ಉತ್ತಮ ನಾಗರೀಕರನ್ನಾಗಿ ರೂಪಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡೋಣ.

ಸಂಪಾದಕ

# ವಿವೇಕವಾಣಿ





ಯಾರು 'ನಾನೇನೂ ಅಲ್ಲ, ನಾನೇನೂ ಅಲ್ಲ' ಎಂದು ಹಗಲಿರುಳೂ ಯೋಚಿಸುತ್ತ ಕುಳಿತಿರುವವನೋ ಅಂಥವನಿಂದ ಏನೊಂದು ಕಾರ್ಯವೂ ಆಗದು. ದಿನವೆಲ್ಲ 'ನಾನು ದೀನ, ನಾನು ಹೀನ, ನಾನೇನೂ ಅಲ್ಲ' ಎನ್ನುತ್ತಲೇ ಇರುವವನು ಕೊನೆಗೂ ನಿಷ್ಪ್ರಯೋಜಕನೇ ಆಗುತ್ತಾನೆ ಎಂಬ ಈ ಸತ್ಯವನ್ನು ನೀವು ಸದಾ ನೆನಪಿಟ್ಟಿರಬೇಕು.

# ಪರಿವಿಡಿ


- ಇಸ್ರೋ ಸಾಧನೆಗೆ ನಮ್ಮ ಹ್ಯಾಟ್ಸ್ ಆಫ್ 3
- ಶಿಕ್ಷಕ ಕ್ಷೇತ್ರದ ಚುನಾವಣೆ "A Necessary Evil?" 4
- ಕನ್ನಡ ರಾಜ್ಯೋತ್ಸವ – ಒಂದು ಚಿಂತನೆ 5
- ಸ್ವಾಮಿ ವಿವೇಕಾನಂದರ ಜೀವನ – ವ್ಯಕ್ತಿತ್ವ ನಿರ್ಮಾಣ 6
- ಸುದ್ದಿ ಸಂಗ್ರಹ 8
- ಮಕ್ಕಳ ಮಂಟಪ 10
- ಜೀವನ ಮೌಲ್ಯಗಳು 11

# ಅಟಲಬಿಹಾರಿ ವಾಜಪೇಯಿಯವರ ಕನಸು ನನಸಾಯಿತು

# ಇಸ್ರೋ ವಿಜ್ಞಾನಿಗಳ ಸಾಧನೆಗೆ ಹ್ಯಾಟ್ಸ್ ಆಫ್



ಪ್ರಧಾನಮಂತ್ರಿಗಳಾಗಿ ಅಟಲ್‌ಬಿಹಾರಿ ವಾಜಪೇಯಿಯವರು ಮಂಗಳಯಾನದ ಕನಸು ಕಂಡಿದ್ದರು. ಇಸ್ರೋ ವಿಜ್ಞಾನಿಗಳಿಗೆ ಪ್ರೋತ್ಸಾಹವನ್ನೂ ನೀಡಿದ್ದರು. ಆ ಕನಸನ್ನು ನಮ್ಮ ವಿಜ್ಞಾನಿಗಳು ನನಸು ಮಾಡಿದ ಕಥೆ ಇಲ್ಲಿದೆ.

ಶ್ರೀ ಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನವೆಂಬರ್ 5ರಂದು ಪಿ.ಎಸ್.ಎಲ್.ವಿ –ಸಿ 25 ಯಶಸ್ವಿಯಾಗಿ ಉಡಾವಣೆಗೊಳ್ಳುವ ಮೂಲಕ ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೋದ ಮಹತ್ವಾಕಾಂಕ್ಷೆ ಯೋಜನೆಯಾದ ಮಂಗಳಯಾನ ಯಶಸ್ವಿಯಾಗಿದೆ. ಅಮೇರಿಕಾ, ರಷ್ಯಾ, ಐರೋಪ್ಯ ಒಕ್ಕೂಟ, ಚೀನಾ ಮತ್ತು ಜಪಾನ್ ನಂತರ ಮಂಗಳಯಾನ ಕೈಗೊಂಡ ರಾಷ್ಟ್ರಗಳ ಸಾಲಿಗೆ ಭಾರತ ಸೇರ್ಪಡೆಗೊಂಡಿದೆ. ಸದ್ಯ ಉಡಾವಣೆಯಾದ ಈ ಉಪಗ್ರಹ 25 ದಿನ ಭೂಮಿ ಸುತ್ತ ಸುತ್ತಲಿದೆ. ನಂತರ ಡಿಸೆಂಬರ್ 1 ರಂದು ಮಂಗಳ ಗ್ರಹದತ್ತ ಪ್ರಯಾಣ ಆರಂಭಿಸಲಿದೆ. ನಿರಂತರ 10 ತಿಂಗಳ ಪ್ರಯಾಣದ ನಂತರ 2014ರ ಸೆಪ್ಟೆಂಬರ್ 24ರಂದು ಮಂಗಳನ ಕಕ್ಷೆಗೆ ತಲುಪಲಿದೆ. ಆ ನಂತರ 160 ದಿನಗಳ ಕಾಲ ಉಪಗ್ರಹ ಮಂಗಳನ ಸುತ್ತ ಸುತ್ತಲಿದೆ. ಈ ಅವಧಿಯಲ್ಲಿ ಮಂಗಳನ ಅಂಗಳದ ಅಚ್ಚರಿಯ ಮಾಹಿತಿ ಹಾಗೂ ಫೋಟೋಗಳನ್ನು ರವಾನಿಸಲಿದೆ. ಮಂಗಳಯಾನ ಇಸ್ರೋ (ಭಾರತೀಯ ಬಾಹ್ಯಾಕಾಶ ಸಂಸ್ಥೆ) ದ ಮೊತ್ತಮೊದಲ ಅನ್ಯಗ್ರಹ ಯೋಜನೆಯಾಗಿದ್ದು ಮಂಗಳ ಗ್ರಹದಲ್ಲಿ ನೀರು, ಜೀವಗಳ ಕುರುಹು, ಮಿಥೇನ್‌ನ ಇರುವಿಕೆಯ ಪತ್ತೆ ಈ ಯೋಜನೆಯ ಪ್ರಮುಖ ಉದ್ದೇಶ. ಈ ಯೋಜನೆಯ ಮೊತ್ತ 450 ಕೋಟಿ ರೂಪಾಯಿ.

---




**ಪ್ರೀತಿಯ ವಿದ್ಯಾರ್ಥಿಗಳೇ,**

ಈ ಸಂಚಿಕೆಯಿಂದ ಮಕ್ಕಳ ಮಂಟಪ ಎಂಬ ಈ ವಿಶೇಷ ಸ್ತಂಭವನ್ನು ನಿಮ್ಮ ಪತ್ರಿಕೆ ನಿಮಗಾಗಿ ಪ್ರಾರಂಭಿಸುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಅಧ್ಯಾಪಕರಿಗೂ ಉಪಯೋಗ ವಾದೀತು. ಇಲ್ಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ವಿದ್ಯಾರ್ಥಿಗಳು ತಮ್ಮ ಉತ್ತರಗಳನ್ನು ಪತ್ರಿಕೆಯ ವಿಳಾಸಕ್ಕೆ ಮುಂದಿನ ತಿಂಗಳ 5 ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕು. ಎಲ್ಲಾ ಸರಿ ಉತ್ತರಗಳನ್ನು ಕೊಡುವ ವಿದ್ಯಾರ್ಥಿಗಳ ಹಾಗೂ ಶಾಲೆಯ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು ಮತ್ತು ಅವರಿಗೆ ಪತ್ರಿಕೆಯ ವತಿಯಿಂದ ಒಂದು ಉತ್ತಮ ಗ್ರಂಥವನ್ನು ಬಹುಮಾನವಾಗಿ ಕಳುಹಿಸಲಾಗುವುದು.

**ಉತ್ತರಕಳಿಸಲು ಪಾಲಿಸಬೇಕಾದ ನಿಯಮ :**

1. ನಿಮ್ಮ ಹೆಸರು, ವಯಸ್ಸು, ತರಗತಿ ಮತ್ತು ಶಾಲೆಯ ಹೆಸರನ್ನು ನಮೂದಿಸಬೇಕು ಹಾಗೂ ಮನೆ ವಿಳಾಸ ಇರಬೇಕು.
2. ಉತ್ತರಗಳನ್ನು ಒಂದು Inland letter ನಲ್ಲಿ ಬರೆದು ಕಳುಹಿಸಬೇಕು ಅದಕ್ಕೆ ಶಾಲಾ ಮುಖ್ಯಸ್ಥರ ರುಜು ಮತ್ತು ಶಾಲಾ ಮುದ್ರೆ ಅಗತ್ಯ.

**– ಸಂಪಾದಕ**

ಕೆ. ಬಾಲಕೃಷ್ಣ ಭಟ್, Ex. MLC, ಅಧ್ಯಕ್ಷರು, ಶಿಕ್ಷಕ ಸಂಘ

# ಶಿಕ್ಷಕ ಕ್ಷೇತ್ರದ ಚುನಾವಣೆ "A Necessary Evil?"

ವಿಧಾನ ಪರಿಷತ್‌ಗೆ ಶಿಕ್ಷಕ ಪ್ರತಿನಿಧಿಯನ್ನು ಆಯ್ಕೆ ಮಾಡುವ ಚುನಾವಣೆಗೆ ಈಗ ಮತ್ತೆ ಚಾಲನೆ ದೊರೆತಿದೆ. ಪ್ರತಿ ಎರಡು ವರ್ಷಕ್ಕೊಮ್ಮೆ ರಾಜ್ಯದಲ್ಲಿ ಬೇರೆ ಬೇರೆ ಶಿಕ್ಷಕರ ಮತಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತದೆ. ಈ ಬಾರಿ ಬೆಂಗಳೂರು ಮತ್ತು ಬೀದರ್–ಗುಲ್ಬರ್ಗಾ ಕ್ಷೇತ್ರಗಳ ಶಿಕ್ಷಕರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾಗಿದೆ. ಈಗ ತಾನೇ ಕಳೆದ ಅಕ್ಟೋಬರ್ ತಿಂಗಳ ಕೊನೆಯೊಳಗೆ ಶಿಕ್ಷಕ ಮತದಾರರ ಹೆಸರು ನೋಂದಾವಣೆಯ ಮೊದಲ ಪಟ್ಟಿಗೆ ಸೇರ್ಪಡೆ ಕೊನೆಗೊಂಡಿದೆ. ಮುಂದೆ ನವಂಬರ–ದಶಂಬರ ತಿಂಗಳಲ್ಲೂ ಹೆಸರು ಸೇರ್ಪಡೆಗೆ ಅವಕಾಶ ಇರುತ್ತದೆ.

ಅದಾಗಲೇ ಕೆಲವೊಂದು ಸ್ವಯಂಘೋಷಿತ ಅಭ್ಯರ್ಥಿಗಳು ತಮ್ಮ ಹಣದ, ಜಾತಿಯ ಪ್ರಭಾವವನ್ನು ದಾಳಕ್ಕೆಸೆಯುವ ಕಾರ್ಯ ಮಾಡಿದ್ದಾರೆ. ಜತೆಗೆ ಶಿಕ್ಷಕ ಮತಕ್ಷೇತ್ರದ ಚುನಾವಣೆಯ ನಿಜವಾದ Stake Holders ನ್ನು ಕಣದಿಂದ ಪಕ್ಕಕ್ಕಿಡುವ ಕಾರ್ಯವೂ ನಡೆದಿದೆ. ಇಂತಹ ಸಂದಿಗ್ಧ ಕ್ಷಣದಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದ ಪಾತ್ರವೇನು? ಕರ್ತವ್ಯವೇನು? ದಾಯಿತ್ವವೇನು? ಎಂಬುದನ್ನು ಚರ್ಚಿಸಲು, ವಿಶದಪಡಿಸಲು ಮತ್ತು ಕೊನೆಗೆ ಕಾರ್ಯಾನ್ವಯಗೊಳಿಸಲು ವೇದಿಕೆಯಾದರೂ ಸಿದ್ಧಗೊಳ್ಳಬೇಡವೇ? 6–7 ಕೋಟಿ ಹಣ ಉಳ್ಳವನೇ ಈ ಚುನಾವಣೆಯಲ್ಲಿ ಸ್ಪರ್ಧಿಸಬಲ್ಲ ಎಂಬ ತಥಾಕಥಿತ ವಾದವನ್ನು ನಾವೂ ಮುಂದಿಡುತ್ತಾ, ಅಂತಹವರಿಗೆ ಮಣೆ ಹಾಕಿ ಜೈ ಎನ್ನೋಣವೇ?

ಆಯಕಟ್ಟಿನಲ್ಲಿ ಕುಳಿತಿರುವ ಕೆಲವರನ್ನು ಬುಕ್ ಮಾಡಿಕೊಂಡು "ಟಿಕೆಟ್" ಗಿಟ್ಟಿಸಿ ನಮ್ಮ ಕಾರ್ಯಕರ್ತರನ್ನು ಚುನಾವಣೆಯಲ್ಲಿ ಕೆಲಸಕ್ಕೆ ಇಳಿಸಿ ಹಣ ಹೆಂಡ, ಜಾತಿ, ಮತ್ತಿನ್ನೇನನ್ನೋ ಬಳಸಿಕೊಂಡು ಚುನಾವಣೆ ಗೆದ್ದರೆ ತಮ್ಮ ಕೆಲಸವಾಯಿತು, ಮತ್ತೆ 6 ವರ್ಷಕ್ಕೆ ಚಿಂತೆಯಿಲ್ಲ ಎಂಬ ಮನೋಭಾವದ ಶಿಕ್ಷಕರ ವ್ಯಾಪಾರಿಗಳನ್ನು ಗೆಲ್ಲಿಸಬೇಕೇ? ಅಥವಾ ಹತ್ತಾರು ವರ್ಷಗಳಿಂದ ಶಿಕ್ಷಕ ಸಂಘದ ಸದಸ್ಯ, ಕಾರ್ಯಕರ್ತ/ ಪದಾಧಿಕಾರಿಯಾಗಿರುವವರನ್ನು ನಿಲ್ಲಿಸಿ ಗೆಲ್ಲಿಸುವ ಯತ್ನ ಮಾಡಬೇಕೇ? ಎಂಬ ದ್ವಂದ್ವದಲ್ಲಿ ನಮ್ಮ ಶಿಕ್ಷಕರಿದ್ದಾರೆ. ಈ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಅಭ್ಯರ್ಥಿಗಳ ಹೆಸರನ್ನು ಕೊನೆ ಕ್ಷಣದಲ್ಲಿ ಶಿಕ್ಷಕ ಸಂಘಕ್ಕೆ ತಿಳಿಸಿದರಾಯಿತು. ಹೇಗಿದ್ದರೂ ಶಿಕ್ಷಕ ಸಂಘದ ಕಾರ್ಯಕರ್ತರು ನಮ್ಮ "ಪರಿವಾರದ" ಕಲ್ಪನೆಗೆ ಬದ್ಧರಾಗಿರುವವರೇ ತಾನೇ? ಸೂಚಿತ ಅಭ್ಯರ್ಥಿಯ ಪರವಾಗಿ ಕೆಲಸ ಮಾಡುವುದಷ್ಟೇ ಶಿಕ್ಷಕ ಸಂಘದ ಕೆಲಸವೆಂದು ತಿಳಿದರೆ ನಷ್ಟವಾಗುವುದು ಮಾತ್ರ ಶಿಕ್ಷಣ ಕ್ಷೇತ್ರಕ್ಕೆ.

ಎಂತೆಂಥ ಮಹಾನುಭಾವರು ಈ ಕ್ಷೇತ್ರದಿಂದ ಆಯ್ಕೆಯಾಗಿ ತಮ್ಮ ಜೀವನವನ್ನೇ ಶಿಕ್ಷಣ–ಶಿಕ್ಷಕರಿಗಾಗಿ ನೀಡಿದ ಉದಾಹರಣೆ ನಮ್ಮೆದುರಿಗಿಲ್ಲ? ಶಿಕ್ಷಕ ಸಂಘವನ್ನು ಯಾರೂ Taken for granted ಆಗಿ ತೆಗೆದು ಕೊಳ್ಳಬೇಕಾಗಿಲ್ಲ. ಶಿಕ್ಷಕ ಸಂಘಕ್ಕೆ ಏನು ಶಕ್ತಿ ಇದೆ? ಎಂಬ ಪ್ರಶ್ನೆಗೆ ಕಳೆದ ಬಾರಿ ಪದವೀಧರ ಕ್ಷೇತ್ರದಿಂದ ಆಯ್ಕೆಯಾದ ವ್ಯಕ್ತಿಗಳನ್ನು ಕೇಳುವುದು ಒಳ್ಳೆಯದು. ಬೆಂಗಳೂರು, ಮೈಸೂರು, ಗುಲ್ಬರ್ಗಾ ಈ ಕ್ಷೇತ್ರಗಳಲ್ಲಿ ಕಳೆದ ಬಾರಿ ನಡೆದ ಪದವೀಧರ ಕ್ಷೇತ್ರದ ಚುನಾವಣೆಯ ಗೆಲುವಿನ ಪ್ರಮುಖ ಪಾಲು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರ ಶ್ರಮಕ್ಕೆ ಸಲ್ಲುತ್ತದೆ ಎಂಬ ನಿಜಾಂಶವನ್ನು ಸಂಬಂಧಪಟ್ಟವರು ಪ್ರಶ್ನಿಸುವುದಾದರೆ ಹಾಗೆಯೇ ಆಗಲಿ. "ಕಟ್ಟಿಕೊಂಡವಳಿಗಿಂತ ಇಟ್ಟು ಕೊಂಡವಳೇ ಮೆಚ್ಚು?" ಹೀಗೊಂದು ಮಾತು ಜನಪದ ಆಡುವುದನ್ನು ಕೇಳಿರಬಹುದು. ತಾಳಿ ಕಟ್ಟಿ, ಶಾಸ್ತ್ರೋಕ್ತವಾಗಿ ಮದುವೆಯಾದವಳು ಕಟ್ಟಿಕೊಂಡವಳು ತಾನೇ. ಕೆಲವೊಮ್ಮೆ ಅವಳಿಗಿಂತ (ಅಕ್ರಮವಾಗಿ) ಇಟ್ಟುಕೊಂಡವಳೇ ಅಚ್ಚು–ಮೆಚ್ಚಿನವಳಾಗುವುದನ್ನು ಕಂಡು ಇಂತಹ ಮಾತು ಬಂದಿರಬೇಕು. ಶಿಕ್ಷಕ ಸಂಘದ ಸಿದ್ಧಾಂತ, ಕಾರ್ಯ, ಪದ್ಧತಿ ಸಂವಿಧಾನ ಮುಂತಾದವುಗಳನ್ನು ಒಪ್ಪಿ ಜತೆಯಲ್ಲಿ ಹತ್ತಾರು ವರ್ಷ ಕಾಲ ಕಾರ್ಯ ಮಾಡುವವರಿಗಿಂತ ಇತ್ತೀಚೆಗೆ ಸಂಪರ್ಕಕ್ಕೆ ಬಂದು ಮೋಡಿಯ ಮಾತಾಡಿದವರು ಟಿಕೆಟ್‌ಗಿಟ್ಟಿಸಿ ಸ್ಪರ್ಧಿಸುವುದನ್ನು ಕಾಣುತ್ತೇವೆ. ಅಂತಹವರು ಹಿಂದೆಯೂ ಇಲ್ಲ. ಮುಂದೆಯೂ ಇರುವುದಿಲ್ಲ. ಹೀಗಿದ್ದೂ ಅಂತಹ ಸ್ವಾರ್ಥ ಸಾಧಕರ ನಯ, ವಿನಯ, ಆಸೆ, ಆಮಿಷಗಳಿಗೆ ಮನಸೋತು ಅವರನ್ನು ಅಪ್ಪಿಕೊಳ್ಳುವುದಕ್ಕೆ

(9ನೇ ಪುಟಕ್ಕೆ.....)

# ಕನ್ನಡ ರಾಜ್ಯೋತ್ಸವ ಒಂದು ಚಿಂತನೆ

### ಕರ್ನಾಟಕ ಏಕೀಕರಣ ಏಕೆ?

ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶವು 'ಛಪ್ಪನ್ನೈವತ್ತಾರು' ಸಂಸ್ಥಾನಗಳಾಗಿದ್ದವು. ಪ್ರತಿಯೊಂದು ಸಂಸ್ಥಾನವೂ ರಾಜರ ಆಳ್ವಿಕೆಯಲ್ಲಿ ಸ್ವತಂತ್ರವಾಗಿ ಆಡಳಿತ ನಡೆಸುತ್ತಿತ್ತು. ಈ ಸಂಸ್ಥಾನಗಳಲ್ಲಿ ಒಂದೇ ಭಾಷೆಯನ್ನಾಡುವ ಜನರು ಒಂದು ಆಡಳಿತಕ್ಕೆ ಒಳಪಟ್ಟಿರಲಿಲ್ಲ. ಕನ್ನಡ ಮಾತನಾಡುವ ಜನರು ಮೈಸೂರು, ಹೈದರಾಬಾದ್, ಸಾಂಗ್ಲಿ, ಮೀರಜ್, ರಾಮದುರ್ಗ, ಜಮಖಂಡಿ, ಮುಧೋಳ್, ಅಕ್ಕಲಕೋಟೆ, ಸಂಡೂರು, ಸವಣೂರು ಮುಂತಾದ ಸಂಸ್ಥಾನಗಳಲ್ಲಿ ಹಾಗೂ ಮುಂಬೈ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ಚದುರಿ ಹೋಗಿದ್ದರು. ಭಾಷಾವಾರು ಪ್ರಾಂತ ರಚನೆಗೆ ಒತ್ತಾಯಿಸಿ 1916 ರಲ್ಲಿ ಆಲೂರು ವೆಂಕಟರಾಯರು ಕರ್ನಾಟಕ ಏಕೀಕರಣ ಚಳವಳಿಯನ್ನು ಆರಂಭಿಸಿದರು. ಆಲೂರು ವೆಂಕಟರಾಯರು ಹಾಗೂ ಅನೇಕರ ಹೋರಾಟದ ಫಲವಾಗಿ 1956 ನವಂಬರ್ 1 ರಂದು ಏಕೀಕೃತ ಕರ್ನಾಟಕ 'ವಿಶಾಲ ಮೈಸೂರು' ಎಂಬ ಹೆಸರಿನಿಂದ ಜನ್ಮ ತಾಳಿತು. ಅನಂತರ 1973ರಲ್ಲಿ ಕರ್ನಾಟಕವೆಂದು ನಾಮಕರಣ ಗೊಂಡಿತು.

### ಕನ್ನಡ ಸಾಹಿತ್ಯ

ಕನ್ನಡ ಭಾಷೆ ಮತ್ತು ಸಾಹಿತ್ಯ ಅತ್ಯಂತ ಪ್ರಾಚೀನವಾದುದು. ಸಂಸ್ಕೃತ ಮಹಾಭಾರತದಲ್ಲಿ 'ಕರ್ನಾಟ, ದೇಶದ ಉಲ್ಲೇಖವಿದೆ. ಕ್ರಿ. ಪೂ. 3ನೇ ಶತಮಾನದ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಕನ್ನಡದ ಉಲ್ಲೇಖವಿದೆ. ಕ್ರಿ. ಶ.2 ನೇ ಶತಮಾನದ ಗ್ರೀಕ್ ಪ್ರಹಸನದಲ್ಲಿ ಕನ್ನಡ ಪದಗಳಿವೆ. ಕ್ರಿ.ಶ.450ರ ಹಲ್ಮಿಡಿ ಶಾಸನದಲ್ಲಿ ಕನ್ನಡ ಭಾಷೆಯ ಪೂರ್ಣ ಪ್ರಮಾಣದ ಮಾದರಿ ದೊರಕುತ್ತದೆ. ಅಲ್ಲಿಂದ ಮುಂದೆ ಕನ್ನಡ ಶಾಸನಗಳು, ಕೃತಿಗಳು ದೊರಕುತ್ತವೆ. ಕನ್ನಡ ಸಾಹಿತ್ಯ ಶ್ರೇಷ್ಠ ಕವಿಗಳ ಅತ್ಯುತ್ತಮ ಕಾವ್ಯಗಳಿಂದ ಶ್ರೀಮಂತವಾಗಿದೆ. ಪಂಪ, ರನ್ನ, ಕುಮಾರವ್ಯಾಸ, ವಚನಕಾರರು, ದಾಸರು ಇನ್ನೂ ಮುಂತಾದವರ ಸಾಹಿತ್ಯದಿಂದ ಶೋಭಿಸುತ್ತಿದೆ. ಕನ್ನಡದಲ್ಲಿ 20, 21ನೇ ಶತಮಾನದಲ್ಲಿ ರಚಿತವಾದ ಸಾಹಿತ್ಯವು ಭಾರತದ ಬೇರೆ ಭಾಷೆಗಳ ಸಾಹಿತ್ಯದ ಮಧ್ಯೆ ಹೊಳೆಹೊಳೆಯುತ್ತಿದೆ. ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದದಿದೆ. ಕನ್ನಡ ಭಾಷೆ ಎಂಟು ಜ್ಞಾನಪೀಠ ಪ್ರಶಸ್ತಿಯ ಗೌರವವನ್ನು ಹೊಂದಿ ಸಾಹಿತ್ಯ ಸರಸ್ವತಿಯ ಮಕುಟದ ಮಣಿಯಾಗಿ ಹೊಳೆಯುತ್ತಿದೆ. ಶ್ರೀ.ಎಂ.ಗೋವಿಂದ ಪೈ, ಕುವೆಂಪು ಹಾಗೂ ಜಿ.ಎಸ್. ಶಿವರುದ್ರಪ್ಪನವರನ್ನು 'ರಾಷ್ಟ್ರಕವಿ'ಗಳಾಗಿ ಪಡೆದ ಹೆಮ್ಮೆಯಿಂದ ಬೀಗುತ್ತಿದೆ. ಕೇಂದ್ರ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ನೀಡಿರುವುದು ಕನ್ನಡದ ಘನತೆಯನ್ನು ಇನ್ನೂ ಹೆಚ್ಚಿಸಿದೆ.




ಇಷ್ಟೆಲ್ಲಾ ವೈಶಿಷ್ಟ್ಯತೆಗಳಿಂದ ಕೂಡಿರುವ ಕನ್ನಡ ನಾಡಿನ ಉತ್ಸವ, ರಾಜ್ಯೋತ್ಸವವನ್ನು ಹೇಗೆ ಆಚರಿಸಬಹುದು? ವರ್ಷಕ್ಕೊಮ್ಮೆ ಕನ್ನಡ ಬಾವುಟ ಹಾರಿಸಿ, ತಳಿರುತೋರಣ ಕಟ್ಟಿ, ವಿದ್ಯುದ್ದೀಪ, ಧ್ವನಿವರ್ಧಕ ಹಾಕಿ ಸಂಭ್ರಮ, ವೈಭವಗಳಿಂದ ರಾಜ್ಯೋತ್ಸವವನ್ನು ಆಚರಿಸುವುದರೊಂದಿಗೆ ಕನ್ನಡ ನಾಡು, ನುಡಿ, ಸಾಹಿತ್ಯದ ವಿಶೇಷತೆಗಳನ್ನು ನೆನಪಿಸುವ ಕಾರ್ಯಕ್ರಮಗಳನ್ನು ವರ್ಷದುದ್ದಕ್ಕೂ ನಡೆಸಬಹುದು. ತಿಂಗಳಿಗೆ ಒಂದಾದರೂ ಕನ್ನಡ ನಾಡಿನ ಸಾಹಿತ್ಯದ ಹಿರಿಮೆಯ ಬಗೆಗಿನ, ನಾಡಿನ ಏಳ್ಗೆಗೆ ದುಡಿದ ಮಹನೀಯರ ಬಗೆಗೆ ಉಪನ್ಯಾಸವನ್ನು ಏರ್ಪಡಿಸುವುದು. ಅಂತಹ ಮಹನೀಯರನ್ನು ಸಮಾರಂಭಕ್ಕೆ ಆಹ್ವಾನಿಸಿ ಗೌರವಿಸುವುದು. ಕನ್ನಡ ವೃತ್ತ ಪತ್ರಿಕೆಗಳನ್ನು ಓದಲು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದು. ಕಾರ್ಯಕ್ರಮದ ವೇದಿಕೆಗಳಿಗೆ, ಮಂಟಪಗಳಿಗೆ ಕನ್ನಡದ ಮಹನೀಯರ ಹೆಸರನ್ನು ಇಡುವುದರ ಮೂಲಕ ಅವರನ್ನು ಸ್ಮರಿಸಿ, ಗೌರವಿಸುವುದು. ಬಿಡುವಿನ ವೇಳೆಯಲ್ಲಿ ತಿಂಗಳಿಗೆ ಒಮ್ಮೆಯಾದರೂ ಕನ್ನಡ ಪುಸ್ತಕಗಳನ್ನು ಮನೆಮನೆಗೆ ಹೋಗಿ ಮಾರಾಟ ಮಾಡುವುದು ಹಾಗೂ ಕೊಂಡುಕೊಳ್ಳುವುದು. ತಪ್ಪಿಲ್ಲದ ಕನ್ನಡವನ್ನು ಮಾತನಾಡುವುದು ಮತ್ತು ಬರೆಯುವುದು. ಮಕ್ಕಳಿಗೆ ಶುದ್ಧವಾದ, ಸ್ಪಷ್ಟವಾದ ಕನ್ನಡವನ್ನು ಮಾತನಾಡಲು, ಓದಲು, ಬರೆಯಲು ಕಲಿಸುವುದು. ಇಂತಹ ಹತ್ತು ಹಲವು ಕಾರ್ಯಕ್ರಮಗಳನ್ನು ವೈಯುಕ್ತಿಕವಾಗಿ, ಸಾಂಘಿಕವಾಗಿ ನಡೆಸುವುದರ ಮೂಲಕ ರಾಜ್ಯೋತ್ಸವವನ್ನು ಸಾರ್ಥಕವಾಗಿ ಆಚರಿಸಿದಂತಾಗುತ್ತದೆ.

**ಶ್ರೀ ಕೆ.ಎಸ್. ವಿಜಯಕುಮಾರ್**
**ಶಿಕ್ಷಕರು, ಸ್ವಾಮಿ ವಿವೇಕಾನಂದ ವಿದ್ಯಾಶಾಲೆ**

# ಸ್ವಾಮಿ ವಿವೇಕಾನಂದರ ಜೀವನ : ವ್ಯಕ್ತಿತ್ವ ನಿರ್ಮಾಣ

■ 'ಶ್ವೇತಾದ್ರಿ'

ಭಾರತ ಮಾತೆ ತನ್ನ ಮಡಿಲಿನಲ್ಲಿ ಅನೇಕ ಮಹನೀಯರಿಗೆ ಜನ್ಮ ನೀಡಿದ್ದಾಳೆ. ಅವರಲ್ಲಿ ಮಹಾತ್ಮಾಗಾಂಧಿ, ರವೀಂದ್ರನಾಥ ಠಾಕೂರ್, ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು ಮುಂತಾದವರು. ಈ ಎಲ್ಲ ಮಹನೀಯರು ಭಾರತದಲ್ಲಷ್ಟೇ ಅಲ್ಲದೆ ಇಡೀ ಜಗತ್ತಿನಲ್ಲಿ ವಿಖ್ಯಾತರು, ಮಹಾತ್ಮರು. ಇವರೆಲ್ಲರ ನಡೆನುಡಿಗಳು, ಆಚಾರ– ವಿಚಾರಗಳು ಆದರ್ಶಪ್ರಾಯ ಹಾಗೂ ಅನುಕರಣೀಯ.

ಸ್ವಾಮಿ ವಿವೇಕಾನಂದರು ತಮ್ಮ ನಡೆನುಡಿಗಳಿಂದ ಇಡೀ ಜಗತ್ತಿನಲ್ಲೇ ವಿಶಿಷ್ಟ ಛಾಪು ಮೂಡಿಸಿದವರು. ಜಾತಿ, ಮತ, ಧರ್ಮ, ದೇಶ, ಕಾಲಾತೀತವಾಗಿ ಎಲ್ಲ ಜನರ ಪ್ರೀತಿ, ಗೌರವ, ಆದರಗಳಿಗೆ ಪಾತ್ರರಾದವರು. ಅವರ ಜೀವನದ ಎಲ್ಲಾ ಘಟನೆಗಳೂ ನಮಗೆ ಮಾರ್ಗಸೂಚಿ, ಅನುಕರಣೀಯ. ಅಂದಿಗೂ, ಇಂದಿಗೂ, ಎಂದೆಂದಿಗೂ. ಸ್ವಾಮಿ ವಿವೇಕಾನಂದರ 150ನೇ ಜನ್ಮೋತ್ಸವದ ಸಂದರ್ಭದಲ್ಲಿ ಅವರ ಗುಣವಿಶೇಷಗಳನ್ನು ಸ್ಮರಿಸುವುದು ಸಮಂಜಸ.

ಬಾಲಕ ನರೇಂದ್ರ ತನ್ನ ಗೆಳೆಯರನ್ನು ಸೇರಿಸಿಕೊಂಡು ಮರಕೋತಿ ಆಟವಾಡುತ್ತಿದ್ದ. ಹುಡುಗರ ಗಲಾಟೆಯನ್ನು ತಡೆಯಲಾಗದೆ ಮನೆಯ ಮಾಲಿಕ ಹುಡುಗರಿಗೆ ಹೀಗೆ ಹೆದರಿಸಿದ. ಮಕ್ಕಳೇ, ಈ ಮರದಲ್ಲಿ ಬ್ರಹ್ಮರಾಕ್ಷಸ ಇದೆ. ಹುಡುಗರು ಅವನ ಮಾತನ್ನು ನಂಬಿದರು. ಯಾರೂ ಮರದ ಹತ್ತಿರ ಸುಳಿಯಲಿಲ್ಲ. ಆದರೆ ನರೇಂದ್ರ ಸ್ನೇಹಿತರ ಎಚ್ಚರಿಕೆಯ ಮಾತನ್ನೂ ಕೇಳದೆ ಮಾರನೆಯ ದಿನ ಆ ಮರವನ್ನು ಹತ್ತಿ ನಿಂತ. ಏನೂ ಆಗಲಿಲ್ಲ. ಮನೆಯ ಮಾಲಿಕನಿಗೆ "ಎಲ್ಲಿ ನಿನ್ನ ಬ್ರಹ್ಮರಾಕ್ಷಸ" ಎಂದ. 'ಬ್ರಹ್ಮರಾಕ್ಷಸ ಇದ್ದಿದ್ದರೆ ನಮಗೆ ಎಂದೋ ಕಾಣಿಸಬೇಕಾಗಿತ್ತು. ಬ್ರಹ್ಮರಾಕ್ಷಸನೂ ಇಲ್ಲ, ಏನೂ ಇಲ್ಲ' ಎಂದು ಸ್ನೇಹಿತರಿಗೆ ಹೇಳಿದ. ಹೀಗೆ ಪ್ರತಿಯೊಂದು ವಿಷಯವನ್ನೂ, ಅದು ಯಾರೇ ಹೇಳಿದರೂ ಪರೀಕ್ಷಿಸುವ ಮನೋಭಾವ ನರೇಂದ್ರನಲ್ಲಿ ಬೆಳೆದು ಬಂದಿತ್ತು. ನರೇಂದ್ರ ತನ್ನ ಗುರುವಾದ ರಾಮಕೃಷ್ಣ ಪರಮಹಂಸರನ್ನೂ ಬಿಡಲಿಲ್ಲ.

ಪರಮಹಂಸರು ಲೋಹವನ್ನು ಮುಟ್ಟಿದರೆ ಅವರ ಮೈ ಸೆಡೆತುಕೊಳ್ಳುತ್ತದೆ ಎಂದು ಅನೇಕ ಬಾರಿ ನರೇಂದ್ರ ಕೇಳಿದ್ದ. ತನ್ನನ್ನು ಯಾರೂ ಹಾಗೇ ಒಪ್ಪಿಕೊಳ್ಳಬಾರದು, ನಾಣ್ಯಪರೀಕ್ಷಕ ಹಣವನ್ನು ಮಿಡಿದು ನೋಡುವಂತೆ ನನ್ನನ್ನೂ ಮಿಡಿದು ನೋಡಬೇಕು ಎಂದು ಪರಮಹಂಸರೂ ಹೇಳುತ್ತಿದ್ದರು. ನರೇಂದ್ರ ಹಾಗೆಯೇ ಮಾಡಿದ. ಪರಮಹಂಸರು ಕಲ್ಕತ್ತೆಗೆ ಹೋಗಿದ್ದರು. ಅವರ ಕೊಠಡಿಯಲ್ಲಿ ನರೇಂದ್ರ ಒಬ್ಬನೇ ಇದ್ದ. ಗುರುವಿನ ಕಾಂಚನ ತ್ಯಾಗದ ಪರೀಕ್ಷೆ ಮಾಡಬೇಕೆನಿಸಿತು. ತಕ್ಷಣ ಒಂದು ರೂಪಾಯಿಯ ನಾಣ್ಯವನ್ನು ತೆಗೆದು ರಾಮಕೃಷ್ಣರ ಹಾಸಿಗೆಯ ಕೆಳಗೆ ಇಟ್ಟ. ರಾಮಕೃಷ್ಣರು ಹಿಂತಿರುಗಿದವರು ಹಾಸಿಗೆಯ ಮೇಲೆ ಕುಳಿತರು. ತಕ್ಷಣ ಅಲ್ಲಿಂದ ಹಾರಿದರು. ಸುತ್ತ ಇದ್ದವರು ಏಕೆಂದು ಕೇಳಿದರೆ ತಮಗೆ ನೂರಾರು ಚೇಳುಗಳು ಕಡಿದಂತಾಯಿತು ಎಂದರು. ಹಾಸಿಗೆಯನ್ನು ಕೊಡವಿದಾಗ ಒಂದು ರೂಪಾಯಿಯ ನಾಣ್ಯ ಕೆಳಗೆ ಬಿತ್ತು. ಅಲ್ಲೇ ಇದ್ದ ನರೇಂದ್ರ ತಾನೇ ಈ ಕೆಲಸ ಮಾಡಿದುದಾಗಿ ಹೇಳಿದ. ತಮ್ಮ ಶಿಷ್ಯ ಹೀಗೆ ಪರೀಕ್ಷಿಸಿದುದು ರಾಮಕೃಷ್ಣರಿಗೂ ಸಂತೋಷವಾಯಿತು. ಎಲ್ಲವನ್ನೂ ಪರೀಕ್ಷಿಸುವ ನರೇಂದ್ರನ ಈ ಗುಣವನ್ನು ಶಿಕ್ಷಕರು ತಮ್ಮ ಶಿಷ್ಯರಲ್ಲಿ ಬೆಳೆಸುವ ಪ್ರಯತ್ನವನ್ನು ಈ ಘಟನೆಗಳನ್ನು ನಿರೂಪಿಸುವುದರ ಮೂಲಕ ಮಾಡಬಹುದಲ್ಲವೇ?

ನರೇಂದ್ರನ ಇನ್ನೊಂದು ಗುಣ ಧೈರ್ಯ. ಒಮ್ಮೆ ನರೇಂದ್ರ ಗರಡಿ ಮನೆಯಲ್ಲಿ ಸ್ನೇಹಿತರ ಜೊತೆ ಟ್ರಪೀಜ್ ಮಾಡುತ್ತಿದ್ದ. ಅದಕ್ಕಾಗಿ ಹೆಚ್ಚು ಭಾರವಾದ ಮರದ ಚೌಕಟ್ಟನ್ನು ಎತ್ತುತ್ತಿದ್ದ. ಅನೇಕರು ನೋಡುತ್ತಿದ್ದರು. ಯಾರೂ ನೆರವಿಗೆ ಬರಲಿಲ್ಲ. ಗುಂಪಿನಲ್ಲಿ ದಷ್ಟ ಪುಷ್ಟನಾದ ಒಬ್ಬ ಬ್ರಿಟಿಷ್ ನಾವಿಕ ಇದ್ದುದನ್ನು ಕಂಡ ನರೇಂದ್ರ ಅವನ ನೆರವು ಕೋರಿದ. ಆ ಬ್ರಿಟಿಷ್ ನಾವಿಕನ ನೆರವಿನಿಂದ ಭಾರವಾದ ಆ ಚೌಕಟ್ಟನ್ನು ಎತ್ತುತ್ತಿದ್ದಾಗ ಹಗ್ಗ ಕಡಿದು ಚೌಕಟ್ಟು ಕೆಳಗೆ ಬಿತ್ತು. ಅದು ನಾವಿಕನಿಗೆ ಬಡಿದು ಅವನು ಪ್ರಜ್ಞೆ ತಪ್ಪಿದ. ತಲೆಗೆ ಗಾಯವಾಗಿ ರಕ್ತ ಸುರಿಯತೊಡಗಿತು. ಇಂಗ್ಲಿಷಿನವನಿಗೆ ಹೀಗಾದದ್ದನ್ನು ನೋಡಿ ಅಲ್ಲಿದ್ದ ಜನ ಓಡಿದರು. ನರೇಂದ್ರನ ಸ್ನೇಹಿತರೂ ಓಟ ಕಿತ್ತರು. ನರೇಂದ್ರ ಮಾತ್ರ ಹೆದರಲಿಲ್ಲ. ತನ್ನ ಪಂಚೆಯನ್ನೇ ಹರಿದು ನಾವಿಕನ ಹಣೆಗೆ ಪಟ್ಟಿ ಕಟ್ಟಿದ. ಮುಖಕ್ಕೆ ನೀರು ಚಿಮುಕಿಸಿ ಉಪಚರಿಸಿದ. ವೈದ್ಯರನ್ನು ಕರೆತಂದ. ವೈದ್ಯರ ಸಲಹೆಯಂತೆ ನಾವಿಕನಿಗೆ ವಿಶ್ರಾಂತಿಗೆ ಏರ್ಪಾಟು ಮಾಡಿದ. ಔಷಧ, ಪಥ್ಯಗಳನ್ನು ಒದಗಿಸುದುದಲ್ಲದೆ ನಾವಿಕ ಹೊರಟಾಗ ಗೆಳೆಯರಿಂದ ಛಂದಾ ಎತ್ತಿದ್ದ ಹಣವನ್ನೂ ಕೊಟ್ಟ. ಈ ಧೈರ್ಯ, ಸಮಯಪ್ರಜ್ಞೆ ಎಲ್ಲರಿಗೂ ಆದರ್ಶವಲ್ಲವೇ? ನಾವು ವಿದ್ಯಾರ್ಥಿಗಳಲ್ಲಿ ಈ ಗುಣ ಬೆಳೆಸಲು ಇದು ಸಹಾಯಕ.

ಸ್ವಾಮೀಜಿ ವಾರಣಾಸಿಯಲ್ಲಿದ್ದಾಗ ನಡೆದ ಘಟನೆ. ದುರ್ಗಾ ದೇವಸ್ಥಾನದಿಂದ ಹಿಂತಿರುಗುತ್ತಿದ್ದಾಗ ಕೋತಿಗಳ ಹಿಂಡು ಇವರನ್ನು ಅಟ್ಟಿಸಿಕೊಂಡು ಬಂದವು. ರಕ್ಷಣೆಗಾಗಿ ಇವರು ಓಡಲಾರಂಭಿಸಿದರು. ಕಪಿಗಳು ಇನ್ನೂ ವೇಗವಾಗಿ

(7ನೇ ಪುಟಕ್ಕೆ.....)

3 ನೇ ಪುಟದಿಂದ... **ವ್ಯಕ್ತಿತ್ವ ನಿರ್ಮಾಣ**

ಓಡಿದವು. ಇದನ್ನೆಲ್ಲ ಗಮನಿಸುತ್ತಿದ್ದ ಒಬ್ಬ ವೃದ್ಧ ಸನ್ಯಾಸಿ ಹೀಗೆ ಹೇಳಿದರು. 'ಓಡಬೇಡಿ. ಕಪಿಗಳನ್ನು ಎದುರಿಸಿ.' ಈ ಕರೆಯನ್ನು ಕೇಳಿ ಧೈರ್ಯದಿಂದ ಆ ಕಪಿಗಳನ್ನು ದೃಷ್ಟಿಸಿ ನೋಡಿದರು. ಅಗ ಆ ಕಪಿಗಳು ಸುಮ್ಮನೆ ಹೊರಟು ಹೋದವು. ಈ ಘಟನೆಯನ್ನು ಉಲ್ಲೇಖಿಸಿ ಸ್ವಾಮಿಜಿ ಹೇಳುತ್ತಿದ್ದರು: 'ಕಷ್ಟಗಳನ್ನು ಧೈರ್ಯವಾಗಿ ಎದುರಿಸಿ. ಜೀವನದಲ್ಲಿ ಕಷ್ಟಗಳು ಕಪಿಗಳಂತೆ ಎದುರಾಗುತ್ತವೆ. ಆಗ ಪಲಾಯನ ಮಾಡದೆ ಪಾರಾಗಬೇಕು. ಹೇಡಿಗಳು ಎಂದಿಗೂ ಜಯ ಸಾಧಿಸಲಾಗುವುದಿಲ್ಲ.'

ವಿವೇಕಾನಂದರಲ್ಲಿದ್ದ ಇನ್ನೊಂದು ಗುಣ ಮನಸ್ಸನ್ನು ಒಂದು ಕಡೆ ನೆಡುವ ಶಕ್ತಿ_ 'ಏಕಾಗ್ರತೆ.' ಬಾಲ್ಯದಿಂದಲೇ ಈ ಶಕ್ತಿ ಅವರಿಗೆ ಬಂದಿತ್ತು. ನರೇಂದ್ರ ಒಮ್ಮೆ ಮಕ್ಕಳೊಡನೆ ಧ್ಯಾನದ ಆಟ ಆಡುತ್ತಿದ್ದ. ಎಲ್ಲರೂ ಕಣ್ಣು ಮುಚ್ಚಿ ಕುಳಿತಿದ್ದರು. ಸ್ವಲ್ಪ ಹೊತ್ತಿನ ನಂತರ ಅವರು ಕಣ್ಣು ತೆರೆದು ನೋಡುತ್ತಾರೆ. ನರೇಂದ್ರನ ಮುಂದೆ ಹಾವು ಹೆಡೆ ಬಿಚ್ಚಿ ನಿಂತಿದೆ! ಎಲ್ಲರೂ ಕೂಗಿಕೊಂಡು ಹೊರಟು ಹೋದರು. ನರೇಂದ್ರನಿಗೆ ತನ್ನ ಮುಂದೆ ಹಾವು ಇರುವುದಾಗಲೀ, ಗೆಳೆಯರು ಕೂಗಿಕೊಂಡದ್ದಾಗಲೀ ತಿಳಿಯಲೇ ಇಲ್ಲ. ಅಂತಹ ಏಕಾಗ್ರತೆಯಿಂದ ಧ್ಯಾನದಲ್ಲಿ ಮುಳುಗಿದ್ದ. ನರೇಂದ್ರನಿಗೆ ಓದಿನಲ್ಲಿ 'ಏಕಾಗ್ರತೆ ಅಗಾಧವಾಗಿತ್ತು. ಒಮ್ಮೆ ಶಾಲೆಯಲ್ಲಿ ಬಿಡುವಿದ್ದಾಗ ನರೇಂದ್ರ ಗೆಳೆಯರೊಂದಿಗೆ ಹರಟೆ ಹೊಡೆಯುತ್ತಿದ್ದ. ಶಿಕ್ಷಕರು ತರಗತಿಗೆ ಬಂದು ಪಾಠ ಪ್ರಾರಂಭ ಮಾಡಿದರು. ನರೇಂದ್ರನ ಗೆಳೆಯರು ಇದನ್ನು ಗಮನಿಸಲಿಲ್ಲ. ನರೇಂದ್ರನ ಕಥೆ ಕೇಳುವುದರಲ್ಲಿ ನಿರತರಾಗಿದ್ದರು. ಸ್ವಲ್ಪ ಸಮಯದ ನಂತರ ಶಿಕ್ಷಕರು ಗುಜುಗುಜು ಶಬ್ದ ಗಮನಿಸಿದರು. ಎಲ್ಲಾ ವಿದ್ಯಾರ್ಥಿಗಳಿಗೂ ಪಾಠದ ಬಗ್ಗೆ ಪ್ರಶ್ನಿಸಿದರು. ಯಾರೂ ಉತ್ತರ ಕೊಡಲಿಲ್ಲ. ನರೇಂದ್ರ ಅವರ ಪ್ರಶ್ನೆಗಳಿಗೆ ಉತ್ತರಿಸಿದ. ಪಾಠ ಹಾಗೂ ಹರಟೆ ಎರಡರಲ್ಲೂ ಮನಸ್ಸನ್ನು ಇಟ್ಟಿದ್ದ. ನರೇಂದ್ರ ಪುಸ್ತಕಗಳನ್ನು ಓದುತ್ತಿದ್ದುದೂ ಹಾಗೆಯೇ. ಒಂದು ಪುಸ್ತಕವನ್ನು ಒಮ್ಮೆ ಓದಿದರೆ ಸಾಕು, ಕರಗತವಾಗುತ್ತಿತ್ತು. ಅವರ ಆರೋಗ್ಯ ಸರಿಯಿಲ್ಲದ ಸಮಯ. ಆಗ ತಾನೇ ಪ್ರಕಟವಾಗಿದ್ದ ಬ್ರಿಟೀಷ್ ವಿಶ್ವಕೋಶದ ಹೊಸ ಆವೃತ್ತಿಯ ಹತ್ತು ಸಂಪುಟಗಳನ್ನು ಒಂದೇ ಸಮನೆ ಓದಿದರು. ಅಷ್ಟೇ ಅಲ್ಲದೆ ತಾವು ಓದಿದ್ದ ವಿಷಯಗಳನ್ನು ಒಂದಾದ ಮೇಲೊಂದರಂತೆ, ಕೆಲವು ಸಲ ಪುಸ್ತಕದಲ್ಲಿ ಬಳಸಿದ್ದ ಭಾಷೆಯನ್ನೇ ಉದ್ಧರಿಸಿ ಹೇಳಿ ಸುತ್ತ ಇದ್ದವರನ್ನೆಲ್ಲ ಆಶ್ಚರ್ಯಚಕಿತರನ್ನಾಗಿಸಿದರು. ಇಂತಹ ಏಕಾಗ್ರತೆ ನಮ್ಮ ವಿದ್ಯಾರ್ಥಿಗಳಿಗೆ ಮಾದರಿಯೇ ಸರಿ. ಈ ಏಕಾಗ್ರತೆಯನ್ನು ಗಳಿಸಲು 'ಧ್ಯಾನ'ದ ಕಡೆ ಗಮನ ಹರಿಸುವಂತೆ ವಿದ್ಯಾರ್ಥಿಗಳಿಗೆ ನಾವು ಮಾರ್ಗದರ್ಶನ ಮಾಡಬಹುದಲ್ಲವೇ?

ಸ್ವಾಮೀಜಿಯವರ ವ್ಯಕ್ತಿತ್ವದಲ್ಲಿನ ಮತ್ತೊಂದು ಗಮನಾರ್ಹ ಗುಣ ದೇಶಭಕ್ತಿ ಹಾಗೂ ಸಮಾಜಸೇವೆ. ಭರತಖಂಡದ ಕೋಟ್ಯಂತರ ಜನರ ದುಃಸ್ಥಿತಿಯನ್ನು ಕಂಡು ವಿವೇಕಾನಂದರ ಹೃದಯ ಹಗಲಿರುಳೂ ಹಿಂಡಿದಂತಾಗುತ್ತಿತ್ತು. ಅದರಿಂದಾಗಿಯೇ ಸುಖದ ಬ್ರಹ್ಮವನ ವಿಹಾರಿ ಯಾಗಬಹುದಾಗಿದ್ದರೂ ಅವರು ನಿಜವಾಗಿ ಸುಖವನ್ನು ಕಾಣಲಿಲ್ಲ. ಅಮೆರಿಕದ ಸುಖದ ಸುಪತ್ತಿಗೆಯಲ್ಲಿ ಉರುಳಿಸಿದರೂ ನೆಲದ ಮೇಲೆ ಮಲಗಿ ಹೊರಳಾಡಿದರು. ತಮ್ಮ ದೇಶದಲ್ಲಿ ಹಸಿದವರನ್ನು, ಬಳಲಿದವರನ್ನು, ಬತ್ತಲೆ ನಿಂತವರನ್ನು ನೆನೆದು ಕೊರಗಿದರು, ಕಣ್ಣೀರು ಸುರಿಸಿದರು. ವಿವೇಕಾನಂದರು ಹೀಗೆ ಕರೆ ನೀಡಿದರು: "ನಿಮ್ಮ ನೆರೆಯವರನ್ನು ಪ್ರೀತಿಸುತ್ತೀರಾ? ದೇವರನ್ನು ಹುಡುಕಿಕೊಂಡು ಎಲ್ಲಿ ಹೋಗುತ್ತೀರಿ?– ಎಲ್ಲ ಬಡವರು, ದುಃಖಿಗಳು, ದುರ್ಬಲರು ದೇವರುಗಳಲ್ಲವೇ? ಅವರನ್ನೇಕೆ ಮೊದಲು ಪೂಜಿಸಬಾರದು? ಹಳೆಯ ಋಷಿಗಳು ಮಾತೃ ದೇವೋ ಭವ, ಪಿತೃ ದೇವೋ ಭವ, ಆಚಾರ್ಯ ದೇವೋ ಭವ ಎಂದರೆ ವಿವೇಕಾನಂದರು "ದರಿದ್ರ ದೇವೋ ಭವ, ದೀನ ದೇವೋ ಭವ!" ಎಂಬ ಹೊಸ ಮಂತ್ರವನ್ನು ನೀಡಿದರು. ಸ್ವಾಮೀಜಿಯವರು ಹೀಗೆ ಬರೆಯುತ್ತಾರೆ. " ನಾನು ಬಡವ. ಬಡವರನ್ನು ಪ್ರೀತಿಸುತ್ತೇನೆ. ಬಡತನ, ಅಜ್ಞಾನಗಳಲ್ಲಿ ಮುಳುಗಿ ಹೋಗಿರುವ ಮೂವತ್ತು ಕೋಟಿ ಭಾರತೀಯರಿಗಾಗಿ ಯಾರ ಹೃದಯ ತಾನೇ ಕರಗುತ್ತದೆ? ದಾರಿ ಯಾವುದು? ಆ ಜನ ನಿಮ್ಮ ದೇವರಾಗಲಿ. ಅವರನ್ನು ಕುರಿತು ಧ್ಯಾನಿಸಿ, ಅವರಿಗಾಗಿ ಕೆಲಸ ಮಾಡಿ. ಅವರಿಗಾಗಿ ನಿರಂತರವೂ ಪ್ರಾರ್ಥನೆ ಮಾಡಿ. ಭಗವಂತ ನಿಮಗೆ ದಾರಿ ತೋರಿಸುತ್ತಾನೆ. ಬಡವರಿಗಾಗಿ ಯಾರ ಹೃದಯ ರಕ್ತ ಸುರಿಸುತ್ತದೆಯೋ ಅವರನ್ನು ನಾನು 'ಮಹಾತ್ಮ' ಎಂದು ಕರೆಯುತ್ತೇನೆ."

ಇನ್ನೊಂದು ಪತ್ರದಲ್ಲಿ ವಿವೇಕಾನಂದರು ಹೀಗೆ ಕರೆ ನೀಡಿದ್ದಾರೆ. "ತರುಣರೇ, ಕಂಕಣ ಕಟ್ಟಿ ನಿಲ್ಲಿ! ಈ ಕಾರ್ಯಕ್ಕಾಗಿಯೇ ನನಗೆ ದೇವರ ಕರೆ ಬಂದಿದೆ. ಆಸೆಯಿರುವುದು ನಿಮ್ಮಲ್ಲಿ. ದುರ್ಬಲರು, ಅಂತ್ಯಜರು, ಆದರೆ ಶ್ರದ್ಧೆಯುಳ್ಳವರಾದ ನಿಮ್ಮಲ್ಲಿ." ಸ್ವಾಮಿ ವಿವೇಕಾನಂದರು ಅಪೇಕ್ಷಿಸಿದಂತೆ ನಾವು ತಮ್ಮ ಕಾಲ ಮೇಲೆ ನಿಲ್ಲುವ ಪುರುಷರನ್ನು, ಕಬ್ಬಿಣದ ಮಾಂಸಖಂಡ ಮತ್ತು ಉಕ್ಕಿನ ನರದ, ಬಲಿಷ್ಠರಾದ, ಸಮರ್ಥರಾದ, ಶ್ರದ್ಧೆಯುಳ್ಳ ಪುರುಷಸಿಂಹರನ್ನು ನಿರ್ಮಾಣ ಮಾಡಬಲ್ಲ ವಿದ್ಯಾಭ್ಯಾಸವನ್ನು ನಮ್ಮ ವಿದ್ಯಾರ್ಥಿಗಳಿಗೆ ನೀಡುವ ಪ್ರಾಮಾಣಿಕ ಪ್ರಯತ್ನವನ್ನು ನಾವೆಲ್ಲರೂ ಮಾಡೋಣ.

●

**ಸುದ್ದಿ ಸಂಗ್ರಹ**

## ಹಳ್ಳಿ ಹುಡುಗಿ ಮಂಜುಳಾ ಸಾಧನೆ

ಸ್ವಿಟ್ಜರ್ಲೆಂಡಿನ ಜಿನೆವಾದಲ್ಲಿ ಅಕ್ಟೋಬರ್ 10 ರಂದು ನಡೆದ 66ನೇ ಅಂತರರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಮಾವೇಶದಲ್ಲಿ ಭಾರತದ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಧಾರವಾಡದ ರಾಮಪುರದ 17 ವರ್ಷದ ಮಂಜುಳ ಮುನವಳ್ಳಿ ಆಯ್ಕೆಯಾಗಿ ತಮ್ಮ ವರದಿ ಮಂಡಿಸಿದರು. ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಒರಿಸ್ಸಾ, ಪಶ್ಚಿಮ ಬಂಗಾಳ, ಜಾರ್ಖಂಡ್, ಕೇರಳ ರಾಜ್ಯಗಳ 26 ಮಕ್ಕಳು ವರದಿ ತಯಾರಿಸಿದ್ದರು. ಇದರಲ್ಲಿ ಕರ್ನಾಟಕದ ಮಂಜುಳಾ ಮುನವಳ್ಳಿ ಹಾಗೂ ಗುಜರಾತ್‌ನ ಅಫ್ಸಾನಾ ನೋಯಿಡಾ ಆಯ್ಕೆಯಾಗಿದ್ದರು.

ರಾಮಾಪುರ, ಧಾರವಾಡದಿಂದ 15 ಕಿ.ಮಿ. ದೂರ ದಲ್ಲಿರುವ ಕೇವಲ 2000 ಜನಸಂಖ್ಯೆ ಹೊಂದಿರುವ ಪುಟ್ಟ ಗ್ರಾಮ. ಇಲ್ಲಿನ ರೈತ ಕುಟುಂಬದ ಮಹಾಂತೇಶ ಹಾಗೂ ಮಹಾದೇವಿ ದಂಪತಿಯ ಹಿರಿಯ ಮಗಳು ಮಂಜುಳಾ ಮುನವಳ್ಳಿ, ಧಾರವಾಡ ಆರ್.ಎಲ್.ಎಸ್ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ ಓದುತ್ತಿರುವ ಮಂಜುಳಾ ಕಳೆದ 6 ವರ್ಷಗಳಿಂದ ಕಿಡ್ಸ್ ಸಂಸ್ಥೆಯ ಗುಬ್ಬಚ್ಚಿ ಮಕ್ಕಳ ಮಹಾಸಂಘದ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ.

## ಬೆಳಕಿನ ಹಬ್ಬದಿಂದಲಾದರೂ ಈ ಎರಡು ದೇಶಗಳ ಸಂಬಂಧಗಟ್ಟಿಯಾಗಲಿ



ಅಮೆರಿದ ಕಾಂಗ್ರೆಸ್‌ನ ಕಛೇರಿಯಲ್ಲಿ ದೀಪಾವಳಿ ಹಬ್ಬವನ್ನು ಆಚರಿಸುವ ನಿರ್ಣಯವೊಂದನ್ನು ಅಮೆರಿಕ ಕಾಂಗ್ರೆಸ್ (ಅಮೆರಿಕದ ಕಾಂಗ್ರೆಸ್ ಅಂದರೆ ಭಾರತದಲ್ಲಿ ಸಂಸತ್ ಸಮಾನವಾದದ್ದು) ತೆಗೆದುಕೊಂಡಿದೆ. ಇದುವರೆಗೆ ಭಾರತೀಯ ಹಬ್ಬಗಳನ್ನು ಆಚರಿಸಲು ವಿರೋಧಿಸುತ್ತಿದ್ದ ಅಮೆರಿಕದ ಕಾಂಗ್ರೆಸ್, ಭಾರತ ಮತ್ತು ಅಮೆರಿಕಗಳ ನಡುವಿನ ಸಂಬಂಧವನ್ನು ಮತ್ತಷ್ಟು ಸುಧಾರಿಸುವ ನಿಟ್ಟಿನಲ್ಲಿ ಈ ಸಂದೇಶವನ್ನು ಸಾರುವ ದೀಪಾವಳಿ ಹಬ್ಬ ಉದಾತ್ತ ಧ್ಯೇಯವನ್ನು ಹೊಂದಿದೆ ಎಂದು ಅಮೆರಿದ ಸೆನೆಟ್ ಸದಸ್ಯ ಮಾರ್ಕ್ಸ್ ವಾರ್ನರ್ ಮತ್ತು ಜಾನ್ ಕೋರ್ನಿನ್ ಹೇಳಿದ್ದಾರೆ.

## ಮೋದಿ, ಪಟೇಲ್‌ರ ಪತ್ರಿಮೆಯನ್ನು ಲೋಹದಲ್ಲೇ ನಿರ್ಮಿಸುತ್ತಾರಂತೆ ಹೌದಾ?

### ರೈತರ ಲೋಹದಿಂದ ಗುಜರಾತ್‌ನಲ್ಲಿ ತಲೆಯೆತ್ತಲಿರುವ ಪಟೇಲ್‌ರ ಪ್ರತಿಮೆ



ಭಾರತದ ಉಕ್ಕಿನ ಮನುಷ್ಯ ಎಂದೇ ಖ್ಯಾತರಾದ ಸರ್ದಾರ್ ವಲ್ಲಬಾಯಿ ಪಟೇಲ್‌ರವರ ಭವ್ಯ ಪುತ್ಥಳಿಯನ್ನು ಮಣ್ಣನ್ನು ಉಳುಮೆ ಮಾಡಿರುವ ದೇಶದ ರೈತರ ನೇಗಿಲ ಮೊನಚಿನ ಲೋಹದಿಂದ ನಿರ್ಮಿಸಲು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ನಿರ್ಧರಿಸಿದ್ದಾರೆ. 182 ಮೀಟರ್ ಖ್ಯಾತಿಗೆ ಪಾತ್ರವಾಗಲಿದೆ. ಪಟೇಲರ 138ನೇ ಜಯಂತಿಯಾದ ಅಕ್ಟೋಬರ್ 31 ರಂದು ಈ ಯೋಜನೆಯ ಶಂಕು ಸ್ಥಾಪನೆಯನ್ನು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ನೆರವೇರಿಸಿದರು.

ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ಯೋಜನೆಯಾದ ಪಟೇಲರ ಪುತ್ಥಳಿ ಸ್ಟ್ಯಾಚ್ಯು ಆಫ್ ಯುನಿಟಿ ಎಂಬ ಹಸರಿನಲ್ಲಿ 2063 ಕೋಟಿ ರೂ ವೆಚ್ಚದಲ್ಲಿ ನರ್ಮದಾ ನದಿಯ ಮಧ್ಯದಲ್ಲಿ ನಿರ್ಮಾಣಗೊಳ್ಳಲಿದೆ. 500 ಕ್ಕೂ ಸಂಸ್ಥಾನ ಗಳನ್ನು ಭಾರತದೊಂದಿಗೆ ವಿಲೀನಗೊಳಿಸುವ ಮೂಲಕ ದೇಶದ ಏಕತೆಯನ್ನು ಸಾರಿದ ಪಟೇಲರ ಸ್ಮರಣಾರ್ಥ ನಿರ್ಮಾಣಗೊಳ್ಳಲಿರುವ ಈ ಪುತ್ಥಳಿಗೆ ದೇಶದ ಪ್ರತಿಯೊಂದು ಹಳ್ಳಿಯ ರೈತರ ಲೋಹವನ್ನು ಬಳಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ದೇಶದ 7 ಲಕ್ಷ ಹಳ್ಳಿಗಳ ರೈತರ ನೇಗಿಲ ಮೊನಚಿನ ಲೋಹ ಸಂಗ್ರಹಿಸಲು ನರೇಂದ್ರ ಮೋದಿ ಯೋಜನೆ ರೂಪಿಸಿದ್ದಾರೆ. ಇದಲ್ಲದೇ ನರ್ಮದಾ ಜಿಲ್ಲೆಯಲ್ಲಿ ಸರ್ದಾರ್ ಪಟೇಲರ ಪುತ್ಥಳಿಯೊಂದಿಗೆ ಸಂಶೋಧನಾ ಕೇಂದ್ರ, ವಿಶ್ವವಿದ್ಯಾಲಯ, ಗ್ರಂಥಾಲಯ, ವಲ್ಲಭಾಯಿ ಪಟೇಲರಿಗೆ ಸಂಬಂಧಿಸಿದ ವಸ್ತು ಸಂಗ್ರಹಾಲಯ, ದೃಶ್ಯ–ಶ್ರಾವ್ಯ ಗ್ಯಾಲರಿಗಳು ನಿರ್ಮಾಣ ಗೊಳ್ಳಲಿದೆ.

**– ಆರ್. ಎಸ್. ಲಕ್ಷ್ಮಿ, ನಿವೃತ್ತ ಅಧ್ಯಾಪಕಿ**

4ನೇ ಪುಟದಿಂದ... **ಚುನಾವಣೆ**

ಏನೆನ್ನಬೇಕು? ಶಿಕ್ಷಕ ಸಂಘ ಕಟ್ಟಿಕೊಂಡವಳಿದ್ದಂತೆ. ಅವಳು ಅಲ್ಲಿ ಬಿದ್ದಿರಲಿ. ಹೊರಗಿನಿಂದ ಬಂದವರಿಗೆ ಮಣೆ ಹಾಕುವುದೇ?

ಶಿಕ್ಷಕ ಸಂಘದ ಕಾರ್ಯಕರ್ತರ ಬಳಿ 6–7 ಕೋಟಿ ಹಣವಿಲ್ಲ. ಹಣವಂತರನ್ನೇ ನಾವೂ ಅಭ್ಯರ್ಥಿಗಳನ್ನಾಗಿ ಮಾಡುವುದಾದರೆ ಅವನು ಚುನಾವಣೆಯಲ್ಲಿ ತೊಡಗಿಸಿದ ಹಣಕ್ಕೆ ಬಡ್ಡಿ–ಚಕ್ರಬಡ್ಡಿ ಮಾತ್ರವಲ್ಲ. ಅದರ ಹತ್ತಾರು ಪಟ್ಟು ಆತ ಅಕ್ರಮವಾಗಿ ಗಳಿಸಬಹುದು. ಕೊನೆಗೆ ಅಂತಹವರಿಗೆ ಮತ ನೀಡಿದ ನಮ್ಮ ಶಿಕ್ಷಕರು ಅವನನ್ನು ಕಾಣಲು ಪರಪ್ಪನ ಅಗ್ರಹಾರಕ್ಕೆ ಹೋಗಬೇಕಾದಿತು. ಪ್ರಪಂಚವೇ ಭ್ರಷ್ಟವಾಗಲಿ. ನಾನಂತೂ ಹಾಗಾಗುವುದಿಲ್ಲ ಎಂಬ ಸಂಕಲ್ಪ ತೊಡುವವರನ್ನು ಮಾತ್ರ ನಾವು ಕಣಕ್ಕಿಳಿಸೋಣ. ಸೋಲು–ಗೆಲುವು ಚುನಾವಣೆಗಳಲ್ಲಿ ಇರುವಂತಹದ್ದೇ. ಆದರೆ ನಾವು ನಂಬಿದ ಸಿದ್ಧಾಂತಕ್ಕೆ ಸೋಲಾಗುವುದೂ ಒಂದೇ, ನಾವು ಬದುಕಿದ್ದೂ ಸತ್ತಂತಾಗುವುದೂ ಒಂದೇ.

ನಮ್ಮ ಹತ್ತಾರು ಸಂಘಟನೆಗಳ ಪೈಕಿ ಕೆಲವಾದರೂ ಇಂತಹ ಬೌದ್ಧಿಕ ದೃಢತೆಯನ್ನು ಕಾಪಾಡಬೇಡವೇ? ಬಾಯಲ್ಲಿ ತತ್ವ ಸಿದ್ಧಾಂತ, ರಾಷ್ಟ್ರೀಯತೆ ಮುಂತಾದ ಮಾತುಗಳನ್ನು ಹೇಳಿ ಏನೂ ಪ್ರಯೋಜನವಿಲ್ಲ. ಅವುಗಳ ಜತೆ Compromise ಮಾಡುತ್ತಾ ಮಾಡುತ್ತಾ ಎಲ್ಲಿಯವರೆಗೆ ಹೋದೀರಿ? ಭಾರೀ Smart, ಭಾರೀ ಬುದ್ಧಿವಂತ, ಬಹುಭಾಷಾವಿಶಾರದ, ಮಾತಿನಲ್ಲೇ ಅರಮನೆ ತೋರಿಸುವ ವ್ಯಕ್ತಿಗಳನ್ನು ಎರಡೆರಡು ಬಾರಿ ಗೆಲ್ಲಿಸಿ ಏನಾಯಿತು? ನಮ್ಮ

5ನೇ ಪುಟದಿಂದ... **ಕಿಮ್ಮನೆಯವರಿಗೊಂದು ಪತ್ರ**

ನಿಮ್ಮ ಯಾರನ್ನೂ ಕೇಳದೆ ಪಕ್ಷ/ ಮಗ್ಗುಲು ಬದಲಿಸಿ ಈಗ ಮತ್ತೆ ನಿಮ್ಮ ಬಳಿ ಟಿಕೆಟ್‌ಗಾಗಿ ಬಂದಿಲ್ಲವೇ? ಅಂತಹವರಿಗಾಗಿ ಕೆಲಸ ಮಾಡಿರಿ ಎಂದು ನಾವು ಯಾವ ಬಾಯಿಯಿಂದ ಹೇಳಲಿ?. ಶಿಕ್ಷಕರು ಹೇಗಿದ್ದರೂ ಚಿನ್ನದ ಉಂಗುರ, ವ್ಯಾನಿಟಿ ಬ್ಯಾಗ್, ಟಿಫನ್ ಬಾಕ್ಸ್, ಸೀರೆ–ಕುಪ್ಪಸಗಳಿಗಾಗಿ ಇರುವವರು ಎಂದು ಅಭ್ಯರ್ಥಿಗಳು ತಿಳಿದುಕೊಂಡರೆ ನೋಡೋಣ ನಮ್ಮಿಂದ ಏನು ಸಾಧ್ಯವೋ ಅದನ್ನು ಮಾಡೋಣ. ಅದಕ್ಕಾಗಿಯೇ ಚುನಾವಣೆಯನ್ನು A necessary evil ಎನ್ನುತ್ತಿರೋದು. ಚುನಾವಣೆ ಪ್ರಜಾಪ್ರಭುತ್ವದಲ್ಲಿ ಅನಿವಾರ್ಯ. ಆದರೆ ಇತ್ತೀಚಿನ ಶಿಕ್ಷಕ ಕ್ಷೇತ್ರದ ಚುನಾವಣೆ ನಡೆಯುವ ರೀತಿ ಮಾತ್ರ ಅಸಹ್ಯ. ಅದಕ್ಕಾಗಿ ಅದು evil.

ಗಿಡಮರಗಳು ತಮ್ಮ ಎಲೆಗಳಲ್ಲಿರುವ ಸೂಕ್ಷ್ಮಾತಿ ಸೂಕ್ಷ್ಮ "Stoma" ಎಂಬ ರಂಧ್ರಗಳಿಂದ ಹಗಲು–ರಾತ್ರಿ ನೀರನ್ನು ಹೊರಹಾಕುತ್ತಿರುತ್ತವೆ. ನೂರಾರು ಮೀಟರ್ ಆಳದಿಂದ ಕಷ್ಟಪಟ್ಟು ಹೀರಿಕೊಂಡ ನೀರಿನ 98% ವನ್ನು ಹೀಗೆ ಹೊರಹಾಕುವ ಅನಿವಾರ್ಯ ಕ್ರಿಯೆ – ಬಾಷ್ಪವಿಸರ್ಜನೆಯನ್ನೂ Necessary Evil ಎನ್ನುತ್ತಾರೆ.

ಅಂತೆಯೇ ದೀಪಾವಳಿಯ ಆಚರಣೆಯಲ್ಲಿ ಜೀವತೆಗೆಯುವ, ಅಂಗವೈಕಲ್ಯ ಉಂಟುಮಾಡುವ ಪಟಾಕಿ–ಸಿಡಿಮದ್ದು ಕೂಡಾ Necessary Evil ಎಂದು ಕರೆಯಲ್ಪಡುತ್ತದೆ. ಹಾಗೆಯೇ ಈ ಚುನಾವಣೆ ಕೂಡ ಅಲ್ಲವೇ? ●

## ಇವು ನಿಮಗೆ ತಿಳಿದಿರಲಿ :

1. **1986 ರಲ್ಲಿ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಹಂಪಿಯನ್ನು ವಿಶ್ವ ಪರಂಪರೆಯ ಪ್ರವಾಸಿ ಸ್ಥಳವೆಂದು ಗುರುತಿಸಿ ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಲಾಗಿದೆ.**
2. **1987 ರಲ್ಲಿ ಕರ್ನಾಟಕ ರಾಜ್ಯದ ಬಾಗಲಕೋಟೆ ಜಿಲ್ಲೆಯಲ್ಲಿರುವ ಪಟ್ಟದಕಲ್ಲು ದೇವಾಲಯವನ್ನು ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಿ ಆಕರ್ಷಕ ಸ್ಥಳವೆಂದು ಪರಿಗಣಿಸಲಾಗಿದೆ.**
3. **ಭಾರತದಲ್ಲಿ ಮೊಟ್ಟ ಮೊದಲು ಆಕಾಶವಾಣಿ ಪ್ರಾರಂಭವಾದದ್ದು ಮೈಸೂರಿನಲ್ಲಿ. 1935 ರಲ್ಲಿ ಪ್ರೊ. ಎಂ. ವಿ. ಗೋಪಾಲಸ್ವಾಮಿಯವರು ಸ್ಥಾಪಿಸಿದರು.**
4. **ಕರಾವಳಿ ಪ್ರದೇಶ, ಮಲೆನಾಡು, ಉತ್ತರದ ಪ್ರಸ್ಥಭೂಮಿ. ದಕ್ಷಿಣದ ಬಯಲು ಪ್ರದೇಶ ಮುಂತಾದ ವೈವಿಧ್ಯತೆಯಿಂದ ಕೂಡಿದ ಭೌಗೋಳಿಕ ಪ್ರದೇಶ ಕರ್ನಾಟಕದಲ್ಲಿದೆ.**
5. **ಕರ್ನಾಟಕದಲ್ಲಿ 2 ಸಾವಿರಕ್ಕೂ ಹೆಚ್ಚು ಐಟಿ ಕಂಪನಿಗಳಿವೆ. ವಿಪ್ರೋ, ಇನ್ಫೋಸಿಸ್‌ನಂತಹ ಜಗತ್ಪ್ರಸಿದ್ಧ ಕಂಪೆನಿಗಳ ಮುಖ್ಯ ಕಛೇರಿಗಳಿವೆ.**

**– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್**





## ವಿದ್ಯಾರ್ಥಿ ಮಿತ್ರ – 1




**1. ರಸಪ್ರಶ್ನೆ : ಇವರ ಪೂರ್ಣ ಹೆಸರೇನು ?**

ಅ) ಟಿ. ಪಿ. ಕೈಲಾಸಂ	ಆ) ಬಿ. ಎಂ. ಶ್ರೀ	ಇ) ತ. ರಾ. ಸು.
ಈ) ಆರ್. ಸಿ. ಹಿರೇಮಠ	ಉ) ತಿ. ತಾ. ಶರ್ಮ

**2. ಇವರು ಯಾರು ಬಲ್ಲಿರಾ ?**

**3. ಈ ಒಗಟುಗಳನ್ನು ಬಿಡಿಸಬಲ್ಲಿರಾ ?**

1. ಕಂದೆತ್ತಿಗೆ ನೂರೊಂದು ಬಾಯಿ
2. ಕರಿ ಸಾಲೆಯೋಳೆ, ಕಾಲುಂಗರದೋಳೆ, ನೆರೆಮನೆಗೋದ್ರೆ ಸರ್‍ರನೆ ಬಾರೆ
3. ಕೆರೆಯಲ್ಲಿ ಕುರಿಹೆಜ್ಜೆ
4. ಚಿಕ್ಕ ಮನೆಗೆ ಚಿನ್ನದ ಬೀಗ
5. ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ ; ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ ; ಬಲ್ಲವರು ಪೇಳಿ ಸರ್ವಜ್ಞ

**4. ಪದಬಂಧ**

ಇದರಲ್ಲಿರುವ ತರಕಾರಿಗಳ ಹೆಸರುಗಳನ್ನು ಪತ್ತೆ ಹಚ್ಚಿ ಎಡಕ್ಕೂ ಬಲಕ್ಕೂ, ಮೇಲಕ್ಕೂ, ಕೆಳಕ್ಕೂ, ಓರೆಯಾಗಿಯೂ ಅಕ್ಷರಗಳನ್ನು ಮಾದರಿಯಂತೆ ಜೋಡಿಸಿರಿ.

| | | | | | | | | | | |
|---|---|---|---|---|---|---|---|---|---|---|
| ಟ | ಹೂ | ಕೋ | ಸು | ಲ | ಸೌ | ಡ | ಕ್ಯಾ | ರೆ | ಟ್ | ಪ |
| ಪ | ಮೊ | ಎ | ಸ | ತೊಂ | ತೆ | ಕು | ಪ | ಮೂ | ಸ | ಡ |
| ತ | ಗ | ಟೋ | ಬೆಂ | ಡೆ | ಕಾ | ಯಿ | ತ | ಲಂ | ಡ | ವ |
| ಹಾ | ಡ | ಲ | ಪ | ಕಾ | ಯಿ | ಜ | ರ | ಗಿ | ವ | ಲ |
| ಲ | ಗ | ಮ | ಸೌ | ಯಿ | ರೆ | ಜ | ಕ | ಪ | ಲ | ಕಾ |
| ಹಾ | ರ | ಲ | ಪಿ | ಮಿ | ಮೆ | ಣ | ಸಿ | ನ | ಕಾ | ಯಿ |
| ಗ | ನು | ಗ್ಗೇ | ಕಾ | ಯಿ | ಸು | ನ | ವಿ | ಲು | ಕೋ | ಸು |

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಜೀವನ ಮೌಲ್ಯಗಳನ್ನು ಕಲಿಸುವ ರೀತಿ

ಕಳೆದ ಸಂಚಿಕೆಯಿಂದ...

■ ಎಚ್ಚೆನ್ನಾರ್

ಕಳೆದ ಸಂಚಿಕೆಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ 5 ಬಗೆಯ ಮೌಲ್ಯಗಳ ಬಗ್ಗೆ ತಿಳಿಸಬೇಕು, ಅವುಗಳಲ್ಲಿ ಮೊದಲನೆಯದು ವೈಯುಕ್ತಿಕ ಮೌಲ್ಯ (Individual value) ಎಂದು ಬರೆದಿದ್ದೆ. ಒಬ್ಬ ವ್ಯಕ್ತಿ ಯಾವ ಯಾವ ಗುಣಗಳನ್ನು ಹೊಂದಿದ್ದರೆ ಅವನ ಜೀವನ ನೆಮ್ಮದಿ, ತೃಪ್ತಿ ಮತ್ತು ಸುಖಮಯವಾಗಿರುತ್ತದೆ ಎಂಬುದಕ್ಕೆ ಮನುಧರ್ಮಶಾಸ್ತ್ರದಲ್ಲಿನ ಈ ಶ್ಲೋಕವನ್ನು ಉದ್ಧರಿಸಬಹುದು.

ಧೃತಿಃ ಕ್ಷಮಾ ಧರ್ಮೋಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥

1. ಧೃತಿ ಎಂದರೆ ಧೈರ್ಯ: ಹೆದರಿಕೆ ಇಲ್ಲದೆ ಕಷ್ಟಗಳನ್ನು ಎದುರಿಸುವ ಸಂತುಲಿತ ಮನಸ್ಥಿತಿಗೆ ಧೈರ್ಯವೆನ್ನುತ್ತೇವೆ.
2. ಕ್ಷಮಾ ಗುಣ: ತಪ್ಪು ಮಾಡಿದವನ ಮೇಲೆ ಸೇಡು ತೀರಿಸಿಕೊಳ್ಳದೆ ಕ್ಷಮಿಸಿಬಿಡುವ ಗುಣ.
3. ದಮ: ಆಸೆಗಳ ಗುಲಾಮನಾಗದೆ ಮನಸ್ಸನ್ನು ಉದಾತ್ತೀಕರಿಸುವುದು, ಹತೋಟಿಯಲ್ಲಿಟ್ಟುಕೊಳ್ಳುವುದು.
4. ಅಸ್ತೇಯ: ಇನ್ನೊಬ್ಬರಿಗೆ ಸೇರಿದ ವಸ್ತುಗಳಿಗಾಗಿ ಆಸೆಪಡದಿರುವುದು, ಕಳ್ಳತನ ಮಾಡದಿರುವುದು.
5. ಶೌಚ: ನಿರ್ಮಲವಾಗಿ, ಚೊಕ್ಕಟವಾಗಿರುವುದು. ಶರೀರ, ಮನಸ್ಸು ಹಾಗೂ ಬುದ್ಧಿಯನ್ನು ಮಲಿನ ಮಾಡಿಕೊಳ್ಳದೆ ಶುದ್ಧವಾಗಿರಿಸಿಕೊಳ್ಳುವ ಗುಣ.
6. ಇಂದ್ರಿಯ ನಿಗ್ರಹ: ಕಣ್ಣು, ಕಿವಿ, ಮೂಗು, ನಾಲಗೆ ಹಾಗೂ ಚರ್ಮ– ಈ ಪಂಚೇಂದ್ರಿಯಗಳಿಂದಲೇ ಮನಸ್ಸು ವಿಚಲಿತವಾಗುವುದು. ಇದನ್ನು ಉದಾತ್ತ ವಿಷಯದತ್ತ ನಿರ್ದೇಶಿಸುವುದು ಗುಣ.
7. ಧೀ– ವಿವೇಕ: ಸರಿ ತಪ್ಪುಗಳನ್ನು ಒರಗೆ ಹಚ್ಚಿ ಸರಿ ದಾರಿಯಲ್ಲಿ ನಡೆಯುವ ಗುಣ.
8. ವಿದ್ಯಾ: ಜ್ಞಾನವನ್ನು ಓದಿ, ಕೇಳಿ, ನೋಡಿ ಅರಿತುಕೊಳ್ಳುವುದೇ ವಿದ್ಯೆ.
9. ಸತ್ಯ: ನೋಡಿದ್ದನ್ನು ನೋಡಿದಂತೆಯೇ ಪ್ರಿಯವಾಗಿ ಹೇಳುವ ಗುಣ.
10. ಅಕ್ರೋಧ: ಕೋಪಗೊಳ್ಳದಿರುವುದು. ಮನಃಶ್ಯಾಂತಿಯನ್ನು ಕಾಪಾಡಿಕೊಳ್ಳುವುದು.

ಈ ಎಲ್ಲಾ ಗುಣಗಳನ್ನು ನಾವು ವಿದ್ಯಾರ್ಥಿಗಳಲ್ಲಿ ಒಡಮೂಡಿಸುವುದು ಯಾವ ರೀತಿ? ಇದಕ್ಕೆ ಸುಲಭ ಮಾರ್ಗ, ಈ ಗುಣಗಳನ್ನು ಪ್ರತಿಬಿಂಬಿಸುವ ಕಥೆಗಳನ್ನು ಹೇಳುವುದು. ನಮ್ಮಲ್ಲಿ ಪಂಚತಂತ್ರ, ಕಥಾಸರಿತ್ಸಾಗರ, ಬೋಧಿಸತ್ವನ ಕಥಾಸಂಗ್ರಹ ಮೊದಲಾದವು, ಈ ದೃಷ್ಟಿಯಿಂದಲೇ ರಚಿತವಾದ ಗ್ರಂಥಗಳು. ಇದರಿಂದ ಸದುಪಯೋಗವನ್ನು ಮಾಡಬಹುದು. ಉದಾಹರಣೆಗೆ ‘ ಪ್ರಾಮಾಣಿಕತೆ’ ಎಂಬ ಗುಣವನ್ನು ತಿಳಿಸುವಾಗ ನಾನು ಪ್ರೈಮರಿ ಶಾಲೆಯಲ್ಲಿ ಓದಿದ ಈ ಕಥೆ ನಿಮಗೂ ಅನುಕೂಲವಾಗಬಹುದು.

ಒಂದು ಗ್ರಾಮ. ಅಲ್ಲೊಂದು ಬಡಕುಟುಂಬ. ಕುಟುಂಬದ ಯಜಮಾನ ರಾಮಪ್ಪ ಕಾಡಿನಿಂದ ಸೌದೆ ಕಡಿದು ತಂದು ಮಾರಾಟಮಾಡಿ ಕುಟುಂಬ ನಿರ್ವಹಣೆ ಮಾಡುತ್ತಿದ್ದ. ಒಮ್ಮೆ ಆತ ಕೊಳದ ಬದಿಯಲ್ಲಿರುವ ಮರದ ಒಣಗಿದ ಕೊಂಬೆಯನ್ನು ಕಡಿಯುತ್ತಿದ್ದಾಗ ಕೊಡಲಿ ಕೈಜಾರಿ ಕೊಳದಲ್ಲಿ ಬಿತ್ತು. ರಾಮಪ್ಪ ಕೊಳದ ಬಳಿ ಕುಳಿತು ಅಳತೊಡಗಿದ. ಆಗ ಕೊಳದಿಂದ ಜಲದೇವತೆ ಎದ್ದು ಬಂದಳು. ಅವಳ ಕೈಲಿ ಒಂದು ಚಿನ್ನದ ಕೊಡಲಿ ಇತ್ತು. ಜಲದೇವತೆ ರಾಮಪ್ಪನ ಬಳಿ ತೆರಳಿ ಅವನನ್ನು ಸಮಾಧಾನಪಡಿಸಿ ವಿಷಯವೇನೆಂದು ಕೇಳಿದಳು. ರಾಮಪ್ಪ, ಈ ದಿನ ನಾನು ಸೌದೆ ಮಾರದೆ ಮನೆಗೆ ಹೋದರೆ ಹೆಂಡತಿ ಮಕ್ಕಳು ಉಪವಾಸ ಬೀಳುವರು. ಆದರೆ ನನ್ನ ಕೊಡಲಿ ನೀರಿನಲ್ಲಿ ಬಿದ್ದಿದೆ ಎಂದು ತನ್ನ ಕಥೆ ಹೇಳಿದ. ಆಗ ಆ ದೇವತೆ ಚಿನ್ನದ ಕೊಡಲಿ ತೋರಿಸಿ ಇದೇನಾ ನಿನ್ನ ಕೊಡಲಿ ಎಂದಳು. ಹೊಳೆಯುವ ಆ ಕೊಡಲಿ ಕಂಡ ರಾಮಪ್ಪ ತಾಯಿ ಇದು ನನ್ನ ಕೊಡಲಿ ಅಲ್ಲ ಎಂದ. ಮತ್ತೆ ದೇವತೆ ಕೊಳದಲ್ಲಿ ಮುಳುಗಿ ಒಂದು ಬೆಳ್ಳಿ ಕೊಡಲಿ ತಂದು ಕೊಟ್ಟಳು. ಆಗಲೂ ರಾಮಪ್ಪ ವಿನಯದಿಂದ ಅದನ್ನು ನಿರಾಕರಿಸಿದ. ಮತ್ತೆ ಮುಳುಗಿಬಂದ ದೇವತೆ ಕಬ್ಬಿಣದ ಕೊಡಲಿ ತಂದಳು ರಾಮಪ್ಪ ಸಂತೋಷದಿಂದ ಹಾಂ, ಅದೇ ನನ್ನ ಕೊಡಲಿ ಎಂದು ಕೂಗಿದ. ದೇವತೆ ಅವನ ಪ್ರಾಮಾಣಿಕತೆಗೆ ಮೆಚ್ಚಿ ಮೂರೂ ಕೊಡಲಿಯನ್ನು ತೆಗೆದುಕೊಂಡು ಹೋಗಲು ಆಗ್ರಹಿಸಿದಳು. ರಾಮಪ್ಪ ದೇವತೆಗೆ ನಮಿಸಿ ಕೊಡಲಿ ಹೊತ್ತು ಮನೆಗೆ ನಡೆದ. ಈ ಕಥೆ ಪ್ರಾಮಾಣಿಕತೆಗೆ ಒಂದು ಉತ್ತಮ ಉದಾಹರಣೆ ಆಗಬಹುದಲ್ಲವೇ? ಇಂಥಾ ಇನ್ನೂ ಅನೇಕ ಕಥೆಗಳನ್ನು ಹೇಳಬಹುದು. ಈ ಕಥೆ ಕಲ್ಪನೆ ಇರಬಹುದು. ಆದರೆ ಇಂದಿಗೂ ಅನೇಕ ಆಟೋ ಚಾಲಕರು ಪ್ರಾಮಾಣಿಕತೆಯನ್ನು ಮೆರೆದ ಜೀವಂತ ಉದಾಹರಣೆಗಳು ನಮ್ಮ ಮುಂದೆ ಇದೆಯಲ್ಲವೇ ?

ಇನ್ನೂ ಇಂಥಹ ಅನೇಕ ಕಥೆಗಳನ್ನು, ಘಟನೆಗಳನ್ನು ನಾವು ಹೇಳುವುದರಿಂದ ಮಕ್ಕಳಿಗೆ ಈ ಮೌಲ್ಯವನ್ನು ಕಲಿಸಿದಂತಾಗುತ್ತದೆಯಲ್ಲವೇ ?

ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು...

# ಆಗ್ರಹ ದಿನ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಆಗ್ರಹ ದಿನದ ಅಂಗವಾಗಿ ದಿನಾಂಕ 17–10–2013ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಗೆ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶಿವಾನಂದ ಸಿಂಧನಕೇರ ಇವರ ನೇತೃತ್ವದ ತಂಡ ಶಿಕ್ಷಕರ ಬೇಡಿಕೆಗಳನ್ನು ಸ್ಪಂದಿಸುವಂತೆ ಆಗ್ರಹಿಸಿ ಮನವಿಯನ್ನು ಸಲ್ಲಿಸಿತು. ಶಿಕ್ಷಕರ ಕಾಲ್ಪನಿಕ ವೇತನ ಬಡ್ತಿಗೆ ಸಂಬಂಧಿಸಿದ ಗೊಂದಲಗಳನ್ನು ಬೇಗನೆ ಪರಿಹರಿಸುವಂತೆ ಆಗ್ರಹಿಸಲಾಯಿತು. ಈ ತಂಡದಲ್ಲಿ ರಾಜ್ಯ ಖಜಾಂಚಿಗಳಾದ ಶ್ರೀ ಜೋಶಿಯವರು ಇದ್ದರು. ಅವರು ಬೆಳಗಾಂನಲ್ಲಿ ನಡೆದ ಕಾರ್ಯಕಾರಿಣಿಯಲ್ಲಿ ನಿರ್ಣಯ ಕೈಗೊಂಡಂತೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಆಗ್ರಹ ದಿನವನ್ನು ಆಚರಿಸಲಾಗುತ್ತದೆ. ಅದಕ್ಕಾಗಿ ಶಿಕ್ಷಣ ಸಚಿವರು ಶಿಕ್ಷಕ ಸಂಘಗಳ ಪದಾಧಿಕಾರಿಗಳನ್ನು ಕರೆದು ಮಾತುಕತೆ ಮಾಡಬೇಕೆಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟೀಲ, ಬೆಂಗಳೂರು ವಿಭಾಗ ಪ್ರಮುಖ್ ಬಿ. ಹೆಚ್. ವರದರಾಜು, ಸಂಘದ ಪ್ರಮುಖರಾದ ತಿಪ್ಪೇಸ್ವಾಮಿ, ಸುರೇಂದ್ರ ಮತ್ತು ಸಂಘದ ಇತರ ಪದಾಧಿಕಾರಿಗಳು ಹಾಜರಿದ್ದರು.



**NOVEMBER 2013**
Date of Posting
20th or 21st of every month

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರೌಢ ಶಾಲೆಗಳು, ಪ್ರೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ "ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ" ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com